بِسۡمِ اللهِ الرَّحۡمٰنِ الرَّحِيۡمِ نَحۡمَدُهٗ وَنُصَلِّی عَلٰی رَسُوۡلِهِ الۡکَرِیۡمِ وَعَلٰی عَبۡدِهِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰهُ بِبَدۡرٍ وَّاَنۡتُمۡ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

10 ಜೂನ್ 2021, 10 ಎಹ್ಸಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
28 ಶವ್ವಾಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمۡرِهٖ وَاَمۡرِهٖ۔

## ಅಲ್ಲಾಹನ ಉಪದೇಶ

یَّهۡدِیۡ بِهِ اللّٰهُ مَنِ اتَّبَعَ رِضۡوَانَهٗ سُبُلَ السَّلٰمِ
وَیُخۡرِجُهُمۡ مِّنَ الظُّلُمٰتِ اِلَی النُّوۡرِ بِاِذۡنِهٖ
وَیَهۡدِیۡهِمۡ اِلٰی صِرَاطٍ مُّسۡتَقِیۡمٍ

(ಅಲ್‌ಮಾಇದ: 17)

ಅಂದರೆ: ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಬಯಸುವವರಿಗೆ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತಾನೆ; ತನ್ನ ಇಚ್ಛಾನುಸಾರ ಅವನು ಅವರನ್ನು ಅಂಧಕಾರಗಳಿಂದೆಲ್ಲ ಹೊರಗೆ ತಂದು ಪ್ರಕಾಶದೆಡೆಗೆ ಕೊಂಡೊಯ್ಯುತ್ತಾನೆ ಹಾಗೂ ಅವರಿಗೆ ಸತ್ಪಥದೆಡೆಗೆ ದಾರಿ ತೋರಿಸುತ್ತಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಜನಾಝಾವನ್ನು ಗೌರವಿಸುವುದು. ಅದು ಅಮುಸ್ಲಿಮರದು ಆದರೂ ಸರಿ.

(1311) ಹಝ್‌ರತ್ ಜಾಬಿರ್ ಬಿನ್ ಅಬ್ದುಲ್ಲ ವರದಿ ಮಾಡುತ್ತಾರೆ. ಅವರು ಹೇಳಿದರು. ನಮ್ಮ ಬಳಿಯಿಂದ ಒಂದು ಜನಾಝ (ಶವಯಾತ್ರೆ) ಹೋಗುತ್ತಿತ್ತು. ನಬಿ(ಸ) ಆಗ ಎದ್ದು ನಿಂತರು. ನಾವು ಸಹ ಎದ್ದುನಿಂತೆವು. ನಾವು ಹೇಳಿದೆವು. ಓ ಪ್ರವಾದಿವರ್ಯರೇ. ಇದು ಯಹೂದಿಯ ಜನಾಝ ಆಗಿತ್ತು. ನಬಿ(ಸ) ನುಡಿದರು. ನೀವು ಜನಾಝ ನೋಡಿದರೆ ಎದ್ದು ನಿಲ್ಲಿಸಿರಿ.

(1312) ಅಬ್ದುರ್ ರಹ್ಮಾನ್ ಬಿನ್ ಅಬೀ ಲೈಲಾ ವರದಿ ಮಾಡುತ್ತಾರೆ, ಹಝ್‌ರತ್ ಸಹಲ್ ಬಿನ್ ಹನೀಫ್ ಮತ್ತು ಹಝ್‌ರತ್ ಖೈಸ್ ಬಿನ್ ಸಅದ್ ಇಬ್ಬರು ಖಾದಸೀಯದಲ್ಲಿ ಕುಳಿತಿದ್ದರು. ಅಷ್ಟರಲ್ಲಿ ಅವರ ಬಳಿಯಿಂದ ಜನರು ಜನಾಝ ತೆಗೆದುಕೊಂಡು ಹೋಗುತ್ತಿದ್ದರು. ಅವರಿಬ್ಬರು ಎದ್ದು ನಿಂತರು. ಅವರಿಗೆ ತಿಳಿಸಲಾಯಿತು. ಈ ಜನಾಝ ಈ ದೇಶದ ಮೂಲನಿವಾಸಿಗಳ ಅಂದರೆ (ಝಿಮ್ಮಿಯವರದ್ದಾಗಿದೆ). ಅವರು ಹೇಳಿದರು. ನಬಿ(ಸ) ರವರ ಬಳಿಯಿಂದ ಒಂದು ಜನಾಝ ಹೊರಟಿತ್ತು. ಅವರು ನಿಂತುಕೊಂಡಿದ್ದರು. ನಬಿ(ಸ) ರವರಿಗೆ ತಿಳಿಸಲಾಯಿತು. ಅದು ಯಹೂದಿಯ ಜನಾಝ ಆಗಿತ್ತು. ಆಗ ಅವರು ಹೇಳಿದರು. ಅವರು ಅಲ್ಲಾಹನ ಜೀವಿಗಳಲ್ಲವೇ?

**(ಸಹೀಹ್ ಬುಖಾರಿ, ಸಂಪುಟ-2, ಕಿತಾಬುಲ್ ಜನಾಯಝ್ ಮುದ್ರಣ 2006 ಖಾದಿಯಾನ್)**

**ತನ್ನ ದಾಸರನ್ನು ಪರೀಕ್ಷಿಸುವ ಹಕ್ಕು ಅಲ್ಲಾಹನಿಗೆ ಇದೆ ಮತ್ತು ಈ ಪರೀಕ್ಷೆ ಮನುಷ್ಯನ ಹಿತಕ್ಕಾಗಿಯೇ ಅವನು ನೀಡಿರುತ್ತಾನೆ.**

**ನನ್ನ ದೃಷ್ಟಿಯಲ್ಲಿ ಇಹಲೋಕದ ದುಃಖಗಳಿಗಾಗಿ ಸುರಿಯುತ್ತಿರುವ ಕಣ್ಣೀರು. ಅದು ಸುರಿಸುತ್ತಿರುವವರಿಗೆ ಬೆಂಕಿಯೆ ಸರಿ, ಅದು ಅವರನ್ನೇ ಭಸ್ಮಗೊಳಿಸುತ್ತದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಒಂದು ದಿನ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು. "ಇಬ್ಬರು ಮಿತ್ರರಲ್ಲಿ ಗೆಳೆತನ ಯಶಸ್ಸು ಆಗಬೇಕಾದರೆ, ಒಮ್ಮೆ ಅವನು ಮಿತ್ರನ ಮಾತನ್ನು ಸ್ವೀಕರಿಸಿದರೆ, ಇನ್ನೊಮ್ಮೆ ಮಿತ್ರನ ಮಾತನ್ನು ಅವನು ಸ್ವೀಕರಿಸಬೇಕು. ಅದೇ ರೀತಿಯ ಸಂಬಂಧ ಅಲ್ಲಾಹನ ಮತ್ತು ಅವನ ದಾಸನ ನಡುವೆ ಇರಬೇಕಾಗಿದೆ. ಒಮ್ಮೆ ಅಲ್ಲಾಹನು ಅವನ ಮಾತು ಸ್ವೀಕರಿಸಿ ತನ್ನ ಅನುಗ್ರಹದ ಬಾಗಿಲುಗಳು ಅವನಿಗಾಗಿ ತೆರೆದರೆ ಮತ್ತೊಮ್ಮೆ ದಾಸನು ಅವನ ನಿರ್ಣಯಕ್ಕೆ ಬದ್ಧನಾಗಿರಬೇಕಾಗುತ್ತದೆ. ವಾಸ್ತವವೇನೆಂದರೆ ತನ್ನ ದಾಸರನ್ನು ಪರೀಕ್ಷಿಸುವ ಹಕ್ಕು ಅಲ್ಲಾಹನಿಗೆ ಇದೆ ಮತ್ತು ಈ ಪರೀಕ್ಷೆ ಮನುಷ್ಯನ ಹಿತಕ್ಕಾಗಿಯೇ ಅವನು ನೀಡಿರುತ್ತಾನೆ. ದೇವನಿಯಮ ಹೀಗೆಯೇ ಇದೆ. ಪರೀಕ್ಷೆಯ ನಂತರ ಯಾರು ತನ್ನನ್ನು ಸುಧಾರಿಸಿ ಕೊಳ್ಳುತ್ತಾರೋ ಅವರಿಗೆ ಅಲ್ಲಾಹನು ತನ್ನ ಔದಾರ್ಯಗಳ ವಾರಸುದಾರರನ್ನಾಗಿ ಮಾಡುತ್ತಾನೆ.

### ಲೌಕಿಕ ಕಾರ್ಯಗಳಲ್ಲಿ ಮುಳುಗಿರುವುದು ಪರಲೋಕದ ನಷ್ಟಗಳಿಗೆ ಕಾರಣವಾಗುತ್ತದೆ

ಒಬ್ಬ ಯುವಕನು ಹಝ್‌ರತ್ ಮಸೀಹ್ ಮೌಊದ್(ಅ) ರವರ ಹತ್ತಿರ ಬಂದು ಲೌಕಿಕ ಆಪತ್ತುಗಳ ಕಥೆ ಪ್ರಾರಂಭಿಸಿದನು. ತಮ್ಮ ನಾನತರಹದ ದುಃಖಗಳನ್ನು ತೋಡಿಕೊಂಡನು. ಹಝ್‌ರತ್ ಮಸೀಹ್ ಮೌಊದ್(ಅ) ಅವನನ್ನು ಸಂತೈಸುತ್ತಾ ಹೇಳಿದರು. "ಯಾವಾಗಲೂ ಐಹಿಕ ಕಾರ್ಯಗಳಲ್ಲಿಯೇ ಮೈಮರೆತರೆ ಅದು ಪರಲೋಕದ ನಷ್ಟಗಳಿಗೆ ಕಾರಣವಾಗುತ್ತದೆ. ಸತ್ಯವಿಶ್ವಾಸಿಯಾದವನಿಗೆ ಅಷ್ಟೊಂದು ಅಲಾಪ ಪ್ರಲಾಪ ಒಳ್ಳೆಯದಲ್ಲ." ಕೊನೆಗೆ ಅವನು ಜೋರಾಗಿ ಅಳತೊಡಗಿದ. ಆಗ ಅವರು ಅಸಮಾಧಾನದಿಂದ ಅಸಂತೋಷ ವ್ಯಕ್ತಪಡಿಸುತ್ತ ಹೇಳಿದರು. ಸಾಕು ಮಾಡಿ. ನಾನು ಇಂತಹ ಅಳುವನ್ನು ನರಕವೆಂದು ಭಾವಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಇಹಲೋಕದ ದುಃಖಗಳಿಗಾಗಿ ಸುರಿಸುತ್ತಿರುವ ಕಣ್ಣೀರು, ಅದು ಸುರಿಸುವವರಿಗೆ ಬೆಂಕಿಯೇ ಸರಿ. ಅದು ಅವರನ್ನೇ ಭಸ್ಮಗೊಳಿಸುತ್ತದೆ. ಇಂತಹ ಕ್ಷುಲ್ಲಕ ವಿಷಯಗಳಿಗಾಗಿ ದುಃಖಿಸುವುದನ್ನು ಕಂಡರೆ ನನ್ನ ಹೃದಯ ಕಠಿಣವಾಗುತ್ತದೆ.

### ಅಲ್ಲಾಹನ ಮೇಲೆ ಭರವಸೆಯ ಆದರ್ಶ ಮಾದರಿ

ಒಂದು ದಿನ ಮಸೀಹ್ ಮೌಊದ್(ಅ) ಸಭೆಯಲ್ಲಿ ತವಕ್ಕಲ್ (ಅಲ್ಲಾಹನ ಮೇಲೆ ಭರವಸೆಯ ವಿಷಯವಾಗಿ ಮಾತುಗಳಾದವು. ಆಗ ಅವರು ನುಡಿದರು. ನಾನು ನನ್ನ ಮನದಲ್ಲಿ ವಿಚಿತ್ರವಾದ ಭಾವನೆಗಳನ್ನು ಹೊಂದಿರುತ್ತೇನೆ. ಉದಾಹರಣೆಗೆ ಯಾವ ರೀತಿ ವ್ಯಾಕುಲತೆ ಉಂಟಾಗುತ್ತದೆ ಮತ್ತು ಸೆಕೆ ವಿಪರೀತಕ್ಕೆ ತಲುಪುತ್ತದೆ. ಜನರು ಆಗ ದೃಢತೆಯಿಂದ ಹೇಳುತ್ತಾರೆ. ಈಗ ಮಳೆಯಾಗುವುದು ಎಂದು. ಅದೇ ರೀತಿ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

**ಅಕಟಾ! ಈ ಕಾಲಘಟ್ಟದಲ್ಲಿ ಮುಸಲ್ಮಾನರು ಸಹ ಹಝ್‌ರತ್ ಮಸೀಹರಿಗೆ ಪಕ್ಷಿಗಳ ಸೃಷ್ಟಿಕರ್ತರು ಎಂಬ ಮಾತನ್ನು ಹೇಳಲು ಪ್ರಾರಂಭಿಸಿದ್ದಾರೆ. ಮಕ್ಕದ ಬಹುದೇವಾರಾಧಕರಿಗೂ ಸಹ ಈ ಪರಿ ಹೇಳಲು ಸಾಧ್ಯವಾಗಲಿಲ್ಲ. ಅಂತಹುದನ್ನು ಮುಸಲ್ಮಾನರು ಧೈರ್ಯದಿಂದ ಹೇಳತೊಡಗಿದ್ದಾರೆ. ಈ ಬುಡವಿಲ್ಲದ ಮಾತನ್ನು ಯಾರು ನಂಬುವರು, ಇದು ಸಹ ಅವರು ಯೋಚನೆ ಮಾಡಲಿಲ್ಲ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅರ್ರಅದ್ ವಚನ(17) ಹದಿನೇಳನೇ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಇದು ಅಲ್ಲಾಹನ ಆಶ್ಚರ್ಯಕರ ವಿಧಿನಿಯಮವಾಗಿದೆ. ಯಾರನ್ನೆಲ್ಲಾ ಲೋಕದ ಜನರು ದೇವನನ್ನಾಗಿ ಮಾಡಿದ್ದಾರೆ. ಅವರ ಜೀವನ ದುಃಖ ಮತ್ತು ಕಷ್ಟಗಳಲ್ಲಿ ಕಳೆದಿದೆ. ಹಝ್‌ರತ್ ಮಸೀಹರಿಗೆ ದೇಶಬಿಟ್ಟು ಹೋಗಬೇಕಾಯಿತು ಮತ್ತು ವಿವಿಧ ರೀತಿಯ ಕಷ್ಟಗಳನ್ನು ಎದುರಿಸಬೇಕಾಯಿತು. ಹಝ್‌ರತ್ ಹುಸೇನರಂತೂ ಹುತಾತ್ಮರಾದರು ಅಷ್ಟೇ. ಶ್ರೀ ರಾಮಚಂದ್ರಜೀ ಅವರು ಸಹ ಆಪತ್ತುಗಳನ್ನು ಎದುರಿಸಿದರು. **"ಲಾ ಯಮ್‌ಲಿಕೂನ ಲಿಅನ್‌ಫುಸಿಹಿಮ್"** ವಚನದಲ್ಲಿ ತಿಳಿಸಲಾಗಿದೆ. ಅವರು ಸ್ವಯಂ ತಮ್ಮ ಜೀವನವನ್ನೇ ರಕ್ಷಿಸಿಕೊಳ್ಳಲಾಗಲಿಲ್ಲ. ಇನ್ನೊಬ್ಬರಿಗೆ ಅವರು ಹೇಗೆ ತಾನೇ ಲಾಭ ಉಂಟುಮಾಡುವರು. **"ಹಲ್ ಯಸ್ತವಿಲ್ ಆಮಾ ವಲ್ ಬಸೀರ್"** ಕುರುಡನು, ದೃಷ್ಟಿಯುಳ್ಳವನೂ ಸಮಾನರೇ? ಅಂದರೆ ನಿಮಗೆ ತಮ್ಮ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی العَالَمِ ۞ شَرَّ السُّمُوْمِ عَدَاوَةُ الصُّلَحَاءِ

**ಶಿಯಾ ಪಂಥದವರಿಗೆ "ಮುಬಾಹಲ" ಮೂಲಕ ಯಾರ ವಿಶ್ವಾಸಗಳು ಇಸ್ಲಾಮಿನ ಅನುಗುಣವಾಗಿವೆ ಎಂದು ತೀರ್ಮಾನಿಸಲು ಆಹ್ವಾನ. ಒಂದು ವರ್ಷದವರೆಗೆ ಮುಬಾಹಲದ ಪರಿಣಾಮ ಕಾಣಲಿಲ್ಲ ಎಂದಾದರೆ ಐದು ಸಾವಿರ ರೂಪಾಯಿಗಳ ಬಹುಮಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥವಾದ "ಸಿರ್‍ರುಲ್ ಖಿಲಾಫ," ರೂಹಾನಿ ಖಝಾಯಿನ್ ಸಂಪುಟ 8 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಈ ಮೇರು ಕೃತಿ ಅವರು 1894 ರಲ್ಲಿ ಬರೆದಿದ್ದರು. ಅವರು ಈ ಗ್ರಂಥ ಬರೆಯುವ ಉದ್ದೇಶ, ಗುರಿ ಮತ್ತು ಅದರ ಪ್ರಾಮುಖ್ಯತೆ ಕುರಿತು ಅದೇ ಗ್ರಂಥದ ಮುಖಪುಟದಲ್ಲಿ ಹೀಗೆ ಬರೆಯಲಾಗಿದೆ.

"ಈ ಗ್ರಂಥ ಶಿಯಾ ಪಂಥ ಮತ್ತು ಸುನ್ನತ್ ಜಮಾಅತ್ ನಡುವೆ ನಿರ್ಣಾಯಕವಾಗಿದೆ. ಖಿಲಾಫತ್ ವಿಷಯದಲಿ ಮಾರ್ಗದರ್ಶಕವಾಗಿದೆ ಮತ್ತು ವಿರೋಧಿಗಳ ಆಕ್ಷೇಪಗಳನ್ನು ರದ್ದುಪಡಿಸುತ್ತದೆ. ಮಿಥ್ಯವಾದಿಗಳ ಮಿಥ್ಯವನ್ನು ಬಯಲುಗೊಳಿಸುತ್ತದೆ. ಲಜ್ಜೆಗೆಟ್ಟವರು, ಸತ್ಯವನ್ನು ಅರಿಯದವರು ಮತ್ತು ಮಿಥ್ಯವಾದಿಗಳ ಅನುಯಾಯಿಗಳು ಮಾತ್ರ ಅದನ್ನು ತಳ್ಳಿಹಾಕುವರು." ಅಂತೆಯೇ ಮುಖಪುಟದಲ್ಲಿ ತನ್ನ ಒಂದು ಅರಬಿ ಸಾಲು ಬರೆದರು.

**ಕಿತಾಬುನ್ ಅಝೀಝುನ್ ಮುಹ್‌ಕಮುಲ್‌ಇಬಾದ್,**
**ಫನಹ್‌ಮದು ಬಾರಿಅನಾ ಅಲಾ ಮಾ ಅಸ್‌ಅದ**

ಅಂದರೆ ಇದು ಶಕ್ತಿಯುತ ಪ್ರಭಾವಿ ಗ್ರಂಥವಾಗಿದೆ. ಅದು ಶತ್ರುಗಳನ್ನು ನಿರುತ್ತರಗೊಳಿಸುವುದು. ಆದುದರಿಂದ ನಾವು ಅಲ್ಲಾಹನನ್ನು ಸ್ತುತಿಸುತ್ತೇವೆ. ಅವನೇ ಈ ಭಾಗ್ಯ ದಯಪಾಲಿಸಿದ್ದು.

ಅಲ್ಲದೇ ಗ್ರಂಥದ ಪ್ರಾರಂಭದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಗ್ರಂಥ ರಚನೆಯ ನಿಜವಾದ ಉದ್ದೇಶ ವಿವರಿಸಿದ್ದಾರೆ. ಅವರು ನುಡಿದರು. "ನಾನು ಶಿಯಾ ಪಂಥದ ಹೆಚ್ಚಿನ ಜನರು ಯಾವ ಹೆದರಿಕೆ ಇಲ್ಲದೇ ನಾಲಿಗೆ ಹರಿಬಿಡುವುದನ್ನು ಕಂಡಿದ್ದೇನೆ ಮತ್ತು ಅಂತ್ಯ ತೀರ್ಮಾನ ದಿನದ ಮಾಲೀಕನೊಡನೆ ಅವರಿಗೆ ಭಯವು ಇಲ್ಲ. ನಿಜವಾದ ಸಂಪತ್ತು ಅವರಲ್ಲಿಲ್ಲ. ಯಾವ ರೀತಿ ನೀತಿಯನ್ನು ಸಹ ಅರಿತಿರುವುದಿಲ್ಲ. ಸಜ್ಜನರಂತೆ ಯೋಚಿಸುವುದಿಲ್ಲ. ಸನ್ಮಾರ್ಗವನ್ನು ಒಪ್ಪುವುದೂ ಇಲ್ಲ. ಆದುದರಿಂದ ನಾನು ಅವರಿಗೆ ಸತ್ಯವನ್ನು ತಿಳಿಸುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ. ಅದರ ಹೊರತು ಬೇರೆ ಮಾರ್ಗವಿಲ್ಲ. ಅಂದ ಹಾಗೆ ನಾನು ಅವಸರದಿಂದ ಈ ಗ್ರಂಥ ಬರೆದಿದ್ದೇನೆ. ಬಹುಶಃ ಇದರಿಂದಾದರೂ ಅವರ ಸ್ಥಿತಿ ಸುಧಾರಿಸಬಹುದು ಮತ್ತು ಅವರ ಭಾವನೆಗಳು ಬದಲಾಗಬಹುದು, ಅವರು ವಿರೋಧ ಹೊಂದಿದ ಸಮಸ್ಯೆಗಳನ್ನು ಬಿಡಿಸಿ ತೋರಿಸಬೇಕು ಮತ್ತು ಖಿಲಾಫತ್ತಿನ ಯಥಾರ್ಥತೆ ಅವರಿಗೆ ಅರುಹಬೇಕು ಎಂದು." (ಸಿರ್‍ರುಲ್ ಖಿಲಾಫ್, ಉರ್ದು ಅನುವಾದ ಪುಟ–7, ಮುದ್ರಣ ಏಪ್ರಿಲ್ 2014 ಖಾದಿಯಾನ್)

ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳು ಈ ಗ್ರಂಥದಿಂದ ಪ್ರಸ್ತುತಪಡಿಸುತ್ತೇವೆ. ಅದರಿಂದ ನಮಗೆ "ಅಸ್‌ಹಾಬೆ ಸಲಾಸ" ರವರ ಸ್ಥಾನಮಾನದ ಬಗ್ಗೆ ಸರಿಯಾದ ಮಾಹಿತಿ ದೊರಕಬಹುದು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಶಿಯಾ ಪಂಥದವರ ಹೃದಯಕ್ಕೆ ಘಾಸಿ ಮಾಡುವಂತ ವಿಶ್ವಾಸಗಳನ್ನು ಅತ್ಯಂತ ಸುಂದರ ರೀತಿಯಲ್ಲಿ ರದ್ದುಪಡಿಸಿದ್ದಾರೆ.

### ಶಿಯಾಗಳ ಒಂದು ವರ್ಗದ ದುಸ್ಥಿತಿ:

ಈ ಜನರ ಒಂದು ವರ್ಗ ಹೀಗಿದೆ. ಅವರು ಉನ್ನತ ದರ್ಜೆಯ ಸಹಾಬರ ಒಂದು ಜಮಾಅತನ್ನು ಮತ್ತು ರಸೂಲುಲ್ಲಾಹ್(ಸ) ರವರ ಖಲೀಫರುಗಳನ್ನು ಮತ್ತು ಸಮುದಾಯದ ದಿಗ್ಗಜರನ್ನು ಹೀಯಾಳಿಸಿದ್ದಾರೆ. ತನ್ನ ನುಡಿಗಳಿಂದ ಮತ್ತು ವಿಶ್ವಾಸದಿಂದ ಅಧಿಕ ಪ್ರಸಂಗಿತನವನ್ನು ಮೆರೆದಿದ್ದಾರೆ. ಅವರನ್ನು ಕಾಫಿರ್ ಮತ್ತು ದಿಕ್ಕಾರಿಗಳೆಂದು ಆರೋಪವನ್ನು ಮಾಡಿದ್ದಾರೆ, ಮತ್ತು ಅವರ ಪ್ರತಿ ಅಪ್ರಮಾಣಿಕವಾಗಿ ಅತಿಕರ್ಮಿಗಳು, ವಂಚಕರು, ದಂಗೆಕೋರರು ಎಂದು ಹೆದರಿಸಿದ್ದಾರೆ. ಅವರು ಸಹಾಬರ ಮೇಲೆ ಶಾಪ ಹಾಕಿ ತಮ್ಮ ಕಾರ್ಯವನ್ನು ಸರಿಯಾದ ಕ್ರಮವೆಂದು ಭಾವಿಸಿದ್ದಾರೆ. (ಅದೇ ಪುಟ 20)

### ಹಝ್ರತ್ ಅಬೂಬಕರ್, ಉಮರ್ ಮತ್ತು ಉಸ್ಮಾನ್(ರ) ರವರ ಮಹಾನತೆ

ನನ್ನ ಪ್ರಭೂ ನನಗೆ ಸ್ಪಷ್ಟಪಡಿಸಿದ್ದಾರೆ. ಸಿದ್ಧೀಖ್, ಫಾರೂಖ್ ಮತ್ತು ಉಸ್ಮಾನ್(ರ) ಸಾತ್ವಿಕರು ಮತ್ತು ಸತ್ಯವಿಶ್ವಾಸಿಗಳಾಗಿದ್ದರು. ಅಲ್ಲಾಹನು ತನಗಾಗಿ ಆಯ್ದುಕೊಳ್ಳುವಂತಹ ಮತ್ತು ತನ್ನ ಅನುಗ್ರಹಗಳಿಂದ ವಿಶೇಷ ರೀತಿಯಲ್ಲಿ ಅನುಗ್ರಹಿಸಿದ ವ್ಯಕ್ತಿಗಳಾಗಿದ್ದ್ರು. ಅವರು ಅಲ್ಲಾಹನ ಸಂತೃಪ್ತಿಗೋಸ್ಕರ ಮಾತ್ರ ತಮ್ಮ ಜನ್ಮಸ್ಥಳವನ್ನು ಬಿಟ್ಟರು, ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು, ಬೇಸಿಗೆ ಕಾಲದ ಬೇಗುದಿಯನ್ನು ಲೆಕ್ಕಿಸಲಿಲ್ಲ. ಚಳಿಗಾಲದ ಚಳಿಯನ್ನು ಲೆಕ್ಕಿಸಲಿಲ್ಲ. ಬದಲು ನವಯುವಕರಂತೆ ಧರ್ಮ ಮಾರ್ಗಗಳಲ್ಲಿ ಮಗ್ನರಾದರು. ಮತ್ತು ತಮ್ಮವರ ಪರರ ಬಗ್ಗೆ ಚಿಂತಿಸಲಿಲ್ಲ. ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿ ಮಾತ್ರ ಸರ್ವಸ್ವವನ್ನು ತ್ಯಾಗಮಾಡಿದರು. (ಅದೇ ಪುಟ 25)

### ಒಂದು ಜ್ಞಾನಗರ್ಭಿತ ನುಡಿ

ಅವರಿಗೆ (ಖುಲ್ಫಾಯೆ–ರಾಶಿದೀನ) ಪ್ರವಾದಿಗಳಿಗೆ ನೀಡಲಾಗುವಂತಹ ಹಿಂಸೆ ನೀಡಲಾಯಿತು. ಅವರನ್ನು ಪ್ರವಾದಿಗಳಂತೆಯೇ ಶಪಿಸಲಾಯಿತು ಹಾಗೆ ಅವರು ಪ್ರವಾದಿಗಳ ವಾರಸುದಾರರು ಎಂದು ಸಾಬೀತಾಯಿತು.

### ಹಝ್ರತ್ ಅಬೂಬಕರ್ ಇಸ್ತಿಖ್ಲಾಫ್ ವಚನಕ್ಕೆ ಸಾದೃಶ್ಯರಾಗಿದ್ದಾರೆ

ಅವರ ಮೇಲೆ ಎಷ್ಟೊಂದು ಆಪತ್ತುಗಳು ಬಂದಿವೆ ಎಂದರೆ ಅವು ಪರ್ವತಗಳ ಮೇಲೆ ಬರುತ್ತಿದ್ದರೆ ಪರ್ವತಗಳು ಧ್ವಂಸಗೊಳ್ಳುತ್ತಿದ್ದವು. ಧ್ವಂಸಗೊಂಡು ಪುಡಿಪುಡಿಯಾಗುತ್ತಿದ್ದವು. ಆದರೆ ಅವರಿಗೆ ಪ್ರವಾದಿಗಳ ರೀತಿಯಲ್ಲಿ ಸ್ಥಿರತೆ ನೀಡಲಾಯಿತು. ಎಲ್ಲಿಯವರೆಗೆಂದರೆ ಅಲ್ಲಾಹನ ಸಹಾಯ ದೊರಕಿತು ಮತ್ತು ಸುಳ್ಳು ಪ್ರವಾದಿಯ ಹತ್ಯೆ ಮತ್ತು ಧರ್ಮರಹಿತರನ್ನು ನಾಶಗೊಳಿಸಲಾಯಿತು. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಆಪತ್ತುಗಳಿಂದ ರಕ್ಷಿಸಿದನು. ಅವರ ಭಯಭೀತ ಸನ್ನಿವೇಶಗಳನ್ನು ಶಾಂತಿಯಲ್ಲಿ ಪರಿವರ್ತಿಸಿದನು. ಮತ್ತು ಅವರ ಧರ್ಮವನ್ನು ಬಲಗೊಳಿಸಿದನು. ಹೀಗೆ ಒಂದು ಲೋಕವನ್ನೇ ಸತ್ಯದ ಮೇಲೆ ಸ್ಥಿರತೆ ದಯಪಾಲಿಸಿದನು. ಮತ್ತು ದಂಗೆಕೋರರ ಮುಖಗಳು ಕಪ್ಪಾದವು. (ಅದೇ ಪುಟ 49)

### ಒಂದು ವೇಳೆ ಅಸ್‌ಹಾಬೆ ಸಲ್ಸಾ (ಅಬೂಬಕರ್, ಫಾರೂಖ್, ಉಸ್ಮಾನ್) ಧಿಕ್ಕಾರಿಗಳು (ಕಾಫಿರ್) ಕಪಟ ವಿಶ್ವಾಸಿಗಳಾಗಿದ್ದರು. (ಮುನಾಫಿಖ್) ಎಂದಾರೆ ಎಲ್ಲರೂ ಸಹ ಕಾಫಿರ್ ಮತ್ತು ಮುನಾಫಿಖ್‌ಗಳೇ ಆದವು.

ಯಾವನು ಅಸ್‌ಹಾಬೆ ಸಲಾಸ ಕಾಫರ್, ಮುನಾಫಿಖ್ ಅಥವಾ ಗಾಸಿಬ್ ಎನ್ನುತ್ತಾನೋ ಅವನು ಎಲ್ಲರನ್ನು ಕಾಫಿರ್ ಎಂದೇ ಹೇಳಿದಂತಾಯಿತು. ಏಕೆಂದರೆ ಎಲ್ಲಾ ಸಹಾಬಿಗಳು ಹಝ್ರತ್ ಅಬೂಬಕರ್ ಹಝ್ರತ್ ಉಮರ್ ಮತ್ತು ಹಜ್‌ರತ್ ಉಸ್ಮಾನ್(ರ) ರವರ ಬೈಅತ್ ಮಾಡಿದವರಾಗಿದ್ದರು. ಈ ಖಲೀಫರುಗಳ ಮಹೋನ್ನತವಾದ ಆಜ್ಞೆಗಳನ್ನು ಪಾಲಿಸುತ್ತಾ ಅವರುಗಳು ಯುದ್ಧಗಳಲ್ಲಿ ಭಾಗವಹಿಸಿದರು ಮತ್ತು ಅವರು ಇಸ್ಲಾಮ್ ಧರ್ಮದ ಪ್ರಚಾರ ಮಾಡುತ್ತಾ ಅವಿಶ್ವಾಸಿಗಳ ದೇಶಗಳನ್ನು ಜಯಿಸಿದರು. (ಅದೇ ಪುಟ 67).

### ರಸೂಲುಲ್ಲಾಹ್(ಸ) ಸ್ಥಾನಮಾನವನ್ನು ಮನಗಾಣಿರಿ ಮತ್ತು ಹುಝೂರ್(ಸ) ರವರ ಸಮಾಧಿಯನ್ನು ಎರಡು ಧಿಕ್ಕಾರಿ ಹಾಗೂ ವಂಚಕರ ನಡುವೆ ಇದೆ ಎನ್ನಬೇಡಿರಿ.

ಓ ದೃಷ್ಟಿಯುಳ್ಳವರೇ! ರಸೂಲುಲ್ಲಾಹ್(ಸ) ರವರ ಸ್ಥಾನಮಾನವನ್ನು ಮನಗಾಣಿರಿ ಮತ್ತು ಹುಝೂರ್(ಸ) ರವರ ಸಮಾಧಿಯನ್ನು ಎರಡು ಕಾಫಿರ್‌ಗಳ ವಂಚಕರ ಮಧ್ಯೆ ಇದೆ ಎಂದು ಹೇಳಬೇಡಿರಿ ಮತ್ತು ತಮ್ಮ ವಿಶ್ವಾಸವನ್ನು (ಅಲಿ) ಮುರ್ತುಝಾ ಅಥವಾ (ಇಮಾಮ್) ಹುಸೇನ್ ಅವರಿಗೋಸ್ಕರ ವ್ಯರ್ಥಗೊಳಿಸದಿರಿ. ನೀನು ಕಾಫಿರುಗಳ ಮಧ್ಯ ಧಫನ್ ಆಗಲು ಮತ್ತು ನಿನ್ನ ಎಡಬಲದಲ್ಲಿ ದಂಗೆಕೋರರ ಎರಡು ಕಾಫಿರುಗಳು ಇರಲು ನಿನ್ನ ಮನಸ್ಸು ಇಷ್ಟಪಡುವುದೇ ಮತ್ತು ಶಾಂತಿ ದೊರೆಯಬಹುದೇ? ಇಲ್ಲ ಎಂದಾದರೆ ಮತ್ತೇಕೆ, ನೀನು ತನಗೆ ಬಯಸದಂತಹ ವಿಚಾರ ಸಯ್ಯದುಲ್ ಅಬ್ರಾರ್ ಹುಝೂರ್(ಸ) ರವರಿಗಾಗಿ ಬಯಸುತ್ತೀ? (ಅದೇ ಪುಟ 74).

### ಎಲ್ಲ ಕಾರ್ಯಗಳಲ್ಲಿ ಅಬೂಬಕರ್ ಪ್ರಥಮರಾಗಿದ್ದರು. ಹಾಗಾದರೆ ಎಲ್ಲ ಒಳಿತುಗಳು ಒಬ್ಬ ಕಾಫಿರ್‌ನಿಂದ ಸಾಧ್ಯವಾಯಿತೇ?

ಆ ಶಿಯಾ ಅವರೊಂದಿಗೆ ಕೇಳಿರಿ. ಇಸ್ಲಾಮ್ ವಿರೋಧಿಯರಿಂದ ಬೇರ್ಪಟ್ಟು ವಯಸ್ಕರಲ್ಲಿ ಇಸ್ಲಾಂ ಧರ್ಮ ಸ್ವೀಕರಿಸುವವರಲ್ಲಿ ಯಾರು ಮೊದಲಿಗರಾಗಿದ್ದರು? ಅವರಿಗೆ ಹಝ್ರತ್ ಅಬೂಬಕರ್ ಎನ್ನದೆ ಬೇರೆ ದಾರಿ ಇಲ್ಲ. ಮತ್ತೆ ಅವರನ್ನು ಕೇಳಿ. ಹಝ್ರತ್ ಖಾತಮನ್ನಬಿಯೀನ್(ಸ) ರವರ ಜೊತೆ ಹಿಜ್ರತ್ ಮಾಡುವ ಸಮಯ ಎಲ್ಲ ಸಂಬಂಧಗಳನ್ನು ಬೆನ್ನ ಹಿಂದೆ ಹಾಕಿ, ಹುಝೂರ್(ಸ) ಹೋದಲ್ಲಿಗೆ ಹೋದವರು ಯಾರು

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರ‍ತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರ‍ತ್ ಪೈಗಂಬರ್(ಸ) ಹೀಗೆ ದುಆ ಮಾಡುತ್ತಾ ಮೂರು ಬಾರಿ ಹಝ್ರ‍ತ್ ಉಮರರ(ರ) ಎದೆಯಲ್ಲಿ ಕೈಯನ್ನು ಸವರಿದರು: ಅಲ್ಲಾಹುಮ್ಮ ಅಖ್ರಿಜ್ ಮಾ ಫೀ ಸದರಿಹೀ ಮಿನ್ ಗಿಲ್ಲಿನ್, ವ ಅಬ್‌ದಿಲ್‌ಹೂ ಈಮಾನ –"ಅವರ ಹೃದಯದಲ್ಲಿ ಇರುವ ಹಗೆಯನ್ನು ದೂರಮಾಡು ಮತ್ತು ಅದನ್ನು ಸತ್ಯವಿಶ್ವಾಸವಾಗಿ ಬದಲಿಸು."**

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರ‍ತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

**ಹಝ್ರ‍ತ್ ಅಬ್ದುಲ್ಲ ಬಿನ್ ಮಸ್‌ಊದ್(ರ) ಹೇಳುತ್ತಾರೆ: ನಾವು ಹಝ್ರ‍ತ್ ಉಮರ್(ರ) ಇಸ್ಲಮ್ ಸ್ವೀಕರಿಸುವುದಕ್ಕು ಮುಂಚೆ ಬಹಿರಂಗವಾಗಿ ಅಲ್ಲಾಹನ ಆರಾಧನೆ ಮಾಡಿರಲಿಲ್ಲ.**

**ಇಂದು ರಮಝ್ಹಾನಿನ ಕೊನೆಯ ಜುಮಾ ಆಗಿದೆ. ಆದ್ದರಿಂದ ಈಗ ನಾನು ಅದರ ಕಡೆಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಇದನ್ನು ರಮಝ್ಹಾನಿನ ಕೊನೆಯ ಜುಮಾ ಎಂಬ ರೀತಿಯಲ್ಲಿ ಮಾತ್ರ ಗಣಿಸಬೇಡಿರಿ. ಬದಲಾಗಿ ಇದು ನಮಗೆ ಬರುವ ದಿನಗಳಿಗೆ ಹೊಸ ಮಾರ್ಗವನ್ನು ನಿಶ್ಚಯಿಸುವದ್ದಾಗಿರಬೇಕು. ರಮಝ್ಹಾನಿನಲ್ಲಿ ಯಾವ ಸಂಗತಿಗಳ ಕಡೆಗೆ ಗಮನವಹಿಸಲಾಯಿತೋ ಮತ್ತು ಯಾವ ಸತ್ಕರ್ಮಗಳನ್ನು ಮಾಡಲು ಸೌಭಾಗ್ಯ ಸಿಕ್ಕಿತ್ತೋ ಅವುಗಳನ್ನು ರಮಝ್ಹಾನಿನ ನಂತರ ಸಹ ಮುಂದುವರೆಸಲು ಪ್ರಯತ್ನಿಸಬೇಕು**

**ನಮ್ಮ ವಿಶ್ವಾಸಗಳನ್ನು ಸುದೃಢಗೊಳಿಸುತ್ತಾ, ನಮ್ಮ ಸತ್ಕರ್ಮಗಳ ಕುರಿತು ಸದಾ ದೃಷ್ಟಿಯಿರಿಸಿಕೊಂಡು ನಮ್ಮ ಸಂತಾನಗಳನ್ನು ರಕ್ಷಿಸಬೇಕೆಂಬುದು ಬಹಳ ಹಿರಿದಾದ ಜವಾಬ್ದಾರಿಯಾಗಿದೆ.**

**ಹೇಗಿದ್ದರೂ ನಮ್ಮ ಕೆಲಸ ದುಆಗಳನ್ನು ಮಾಡುವುದು ಮತ್ತು ದುಆಗಳನ್ನು ಮಾಡುತ್ತಾ ಹೋಗುವುದಾಗಿದೆ. ರಮಝ್ಹಾನಿನಲ್ಲೂ ರಮಝ್ಹಾನಿನ ನಂತರವೂ. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ**

**ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ್ನೀ ವನ್‌ಸುರ್‌ನೀ ವರ್‌ಹಮ್‌ನೀ ಮತ್ತು ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಝುಬಿಕ ಮಿನ್ ಶುರೂರಿಹಿಂ.** ಈ ದುಆಗಳನ್ನು ಬಹಳವಾಗಿ ಮಾಡಿರಿ.

**ನಮ್ಮ ಸತ್ಕರ್ಮಗಳೇ ನಮ್ಮನ್ನು ರಕ್ಷಿಸುವುದು. ಯಾವುದೇ ಸಂಬಂಧ, ಯಾವುದೇ ಕುಟುಂಬ ಯಾರನ್ನು ರಕ್ಷಿಸದು. ಆದ್ದರಿಂದ ಇದಕ್ಕಾಗಿ ಸದಾ ಬಹಳ ದುಆ ಮಾಡಬೇಕು. ನಮ್ಮ ದೀನೀ ದೌರ್ಬಲ್ಯಗಳ ಬಗ್ಗೆ ದೃಷ್ಟಿಯಿರಿಸಬೇಕು. ನಮ್ಮ ಮಕ್ಕಳು ಭೌತಿಕತೆಗಿಂತ ಧಾರ್ಮಿಕತೆಯಲ್ಲಿ ಪ್ರಗತಿ ಹೊಂದಲು ದುಆ ಮಾಡಬೇಕು. ಭೌತಿಕವಾದ ಅಭಿವೃದ್ಧಿಗಾಗಿ ನಾವು ದುಆಗಳನ್ನು ಮಾಡುತ್ತಿರುತ್ತೇವೆ. ಧಾರ್ಮಿಕವಾದ ಏಳಿಗೆಗಾಗಿ ಅದಕ್ಕಿಂತ ಹೆಚ್ಚು ದುಆ ಮಾಡಬೇಕು**

**ಲೋಕದಲ್ಲಿ ಹರಡಿರುವ ಕೊರೋನ ಮಹಾಮಾರಿಯಿಂದ ರಕ್ಷಣೆ ಪಡೆಯಲು ಮತ್ತು ಅಲ್ಲಾಹನ ಕೃಪೆ ಪಡೆಯಲು ಸಹ ವಿಶೇಷವಾಗಿ ದುಆಗಳನ್ನು ಮಾಡಿರಿ**

**ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ಸದಖ, ದಾನಧರ್ಮಗಳು ಮತ್ತು ಪ್ರಾರ್ಥನೆಗಳ ಕಡೆಗೆ ಯಾವಾಗಲೂ ಬಹಳ ಹೆಚ್ಚು ಗಮನವಹಿಸಬೇಕು**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‍ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–05–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‍ತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರ‍ತ್ ಉಮರ್ ರಝಿಯಲ್ಲಾಹು ಅನ್‌ಹುರ ಇಸ್ಲಾಮ್ ಸ್ವೀಕಾರದ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಹಝ್ರ‍ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರ‍ತ್ ಉಮರ್(ರ) ಇಸ್ಲಾಮ್ ಧರ್ಮವನ್ನು ನಿರಂತರವಾಗಿ ವಿರೋಧಿಸುತ್ತಿದ್ದರು. ಇಸ್ಲಾಂ ಧರ್ಮವನ್ನು ಸ್ವೀಕರಿಸುವ ವರೆಗೆ ಅವರು ನಿರಂತರವಾಗಿ ವಿರೋಧಿಸುತ್ತಿದ್ದರು. ಈ ಧರ್ಮದ ಸ್ಥಾಪಕರನ್ನೇ ಕೊನೆಗೊಳಿಸಲು ಅವರು ಒಂದು ದಿನ ನಿರ್ಧರಿಸಿದರು. ಹೀಗೆ ಅವರು ಖಡ್ಗವನ್ನು ಹಿಡಿದುಕೊಂಡು ಮನೆಯಿಂದ ಹೊರಟರು. ಉಮರ್, ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಮಾರ್ಗ ಮಧ್ಯೆ ಯಾರೋ ಕೇಳಿದರು. ಮುಹಮ್ಮದ್‌ರನ್ನು(ಸ) ವಧಿಸಲು ಹೋಗುತ್ತಿದ್ದೇನೆ ಎಂದು ಅವರು ಉತ್ತರಿಸಿದರು. ಮೊದಲು ಮನೆಯ ಕಾರ್ಯವನ್ನು ನೋಡು, ನಿನ್ನ ಸಹೋದರಿ ಮತ್ತು ಅಳಿಯ ಸತ್ಯವಿಶ್ವಾಸವನ್ನು ಕೈಗೊಂಡಿರುವರು ಎಂದು ಆ ವ್ಯಕ್ತಿ ನಗುತ್ತಾ ಹೇಳಿದರು. ನೀನು ಸುಳ್ಳು ಹೇಳುತ್ತಿದ್ದೀಯ ಎಂದು ಉಮರ್ ಹೇಳಿದರು. ಸ್ವತಃ ಹೋಗಿ ನೋಡು ಎಂದು ಆ ವ್ಯಕ್ತಿ ಹೇಳಿದರು. ಹಝ್ರ‍ತ್ ಉಮರ್ ಸಹೋದರಿಯ ಮನೆಗೆ ಹೋದರು. ಬಾಗಿಲು ಮುಚ್ಚಲಾಗಿತ್ತು. ಅಲ್ಲಿ ಓರ್ವ ಸಹಾಬಿ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಹಝ್ರ‍ತ್ ಉಮರ್ ಬಾಗಿಲು ತಟ್ಟಿದರು. ಯಾರೆಂದು ಒಳಗಿನಿಂದ ಅವರ ಅಳಿಯ ಕೇಳಿದರು. ಉಮರ್, ಎಂದು ಉಮರ್ ಹೇಳಿದರು. ಇಸ್ಲಾಮಿನ ಕಠಿಣ ವಿರೋಧಿಯಾದ ಉಮರ್ ಬಂದಿರುವುದಾಗಿ ಗೊತ್ತಾದಾಗ, ಪವಿತ್ರ ಖುರ್‌ಆನ್ ಕಲಿಸುತ್ತಿದ್ದ ಆ ಸಹಾಬಿಯೊಡನೆ ಅಡಗಿ ಕುಳಿತುಕೊಳ್ಳಲು ಅಳಿಯನು ಹೇಳಿದರು. ಅದೇ ರೀತಿಯಲ್ಲಿ ಪವಿತ್ರ ಖುರ್‌ಆನಿನ ಪುಟಗಳನ್ನು ಸಹ ಎಲ್ಲೋ ಅಡಗಿಸಿ ಇಟ್ಟುಕೊಂಡು ಬಾಗಿಲನ್ನು ತೆರೆದರು. ಸಹೋದರಿ ಮತ್ತು ಅಳಿಯನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಸುದ್ದಿ ಕೇಳಿಬಂದಿದ್ದ ಉಮರ್, ಅವರೊಡನೆ ತಡವಾಗಿ ಬಾಗಿಲನ್ನು ತೆರೆಯಲು ಕಾರಣವೇನೆಂದು ಕೇಳಿದರು. ಕೆಲವೊಮ್ಮೆ ತಡವಾಗುತ್ತದೆ ಎಂದು ಅಳಿಯನು ಹೇಳಿದರು. ಸಂಗತಿ ಇದಲ್ಲ, ಯಾವುದೋ ವಿಶೇಷವಾದ ಸಂಗತಿಯಿಂದ ಬಾಗಿಲು ತೆರೆಯಲು ತಡಮಾಡಲಾಗಿತ್ತು ಎಂದು ಉಮರ್ ಹೇಳಿದರು. ನೀವು ಸಾಬಿಯ ಮಾತುಗಳನ್ನು ಕೇಳುತ್ತಿರುವುದಾಗಿ ನನಗೆ ಕೇಳಿಬರುತ್ತಿತ್ತು ಎಂದು ಸಹ ಉಮರ್ ಹೇಳಿದರು. ಮಕ್ಕದ ಮುಶ್ರಿಕರು ಹಝ್ರ‍ತ್ ಪೈಗಂಬರ್‌ರನ್ನು ಸಾಬಿ ಎಂದು ಕರೆಯುತ್ತಿದ್ದರು ಅಳಿಯನು ಸಂಗತಿಯನ್ನು ಮರೆಮಾಚಲು ಪ್ರಯತ್ನಿಸಿದಾಗ ಹಝ್ರ‍ತ್ ಉಮರ್‌ರಿಗೆ(ರ) ಕೋಪಬಂತು. ಅಳಿಯನನ್ನು ಹೊಡೆಯಲು ಮುಂದಾದರು. ಹಝ್ರ‍ತ್ ಉಮರರ(ರ) ಸಹೋದರಿ ಮಧ್ಯೆ ಪ್ರವೇಶಿಸಿದರು. ಉಮರರ(ರ) ಕೈ ಅವರ

ಮೂಗಿಗೆ ತಗುಲಿತು ಮತ್ತು ರಕ್ತ ಸುರಿಯಲು ತೊಡಗಿತು. ಹಝ್ರತ್ ಉಮರ್(ರ) ಭಾವುಕರಾಗುವ ವ್ಯಕ್ತಿಯಾಗಿದ್ದರು. ಆದ್ದರಿಂದ ಇದನ್ನು ನೋಡಿಕೊಂಡು ಅವರೊಳಗೆ ಕರುಣೆಯ ಭಾವನೆ ಉಂಟಾಯಿತು. ಅವರು ಪವಿತ್ರ ಖುರ್‌ಆನಿನ ಪುಟಗಳನ್ನು ತೋರಿಸಲು ವಿನಂತಿಸಿದರು. ಅದಕ್ಕಾಗಿ ಅವರ ಸಹೋದರಿ ಆಗ್ರಹ ಪಡಿಸಿದ ಪ್ರಕಾರ ಅವರು ಸ್ನಾನ ಮಾಡಿದರು. ಸ್ನಾನ ಮಾಡಿದ ನಂತರ ಅವರು ಪವಿತ್ರ ಖುರ್‌ಆನಿನ ಆಯತ್ತುಗಳನ್ನು ಓದಿದರು. ಅವರೊಳಗೆ ಒಂದು ಬದಲಾವಣೆ ಉಂಟಾಗಿದ್ದ ಕಾರಣದಿಂದ ಆ ವಚನಗಳನ್ನು ಓದಿ ಕೊನೆಗೊಳಿಸಿದ ನಂತರ ಅವರು ಶಹಾದತ್ ಕಲಿಮ ಉಚ್ಚರಿಸಿದರು. ಇದನ್ನು ಆಲಿಸಿದಾಗ, ಅಡಗಿ ಕುಳಿತ್ತಿದ್ದ ಸಹಾಬಿ ಹೊರಗೆ ಬಂದರು. ಹಝ್ರತ್ ಪೈಗಂಬರ್(ಸ) ಈಗ ಎಲ್ಲಿ ತಂಗಿರುವರು ಎಂದು ಹಝ್ರತ್ ಉಮರ್(ರ) ಕೇಳಿದರು. ವಿರೋಧದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಮನೆ ಬದಲಿಸುತ್ತಾ ತಂಗುತ್ತಿದ್ದರು. ಈಗ ದಾರುಲ್ ಅರ್ಕಮ್‌ನಲ್ಲಿ ಇರುವರು ಎಂದು ಅವರೊಡನೆ ಹೇಳಲಾಯಿತು. ಹಝ್ರತ್ ಉಮರ್(ರ) ತೆರೆದ ಖಡ್ಗವನ್ನು ಹಿಡಿದುಕೊಂಡೇ ಅಲ್ಲಿಂದ ಹೊರಡಲು ತಯಾರಾದರು. ಬಹುಶಃ ದುರುದ್ದೇಶದಿಂದ ಹೋಗುತ್ತಿದ್ದಾರೆಯೇ ಎಂದು ಅರಿಯಲು ಹಝ್ರತ್ ಉಮರರ(ರ) ಸಹೋದರಿ ಹೀಗೆ ಕೇಳಿದಳು: ಅಲ್ಲಾಹನಾಣೆ, ನೀವು ಏನಾದರೂ ತೊಂದರೆ ಕೊಡುವ ಉದ್ದೇಶದಿಂದ ಹೋಗುತ್ತಿಲ್ಲವೆಂದು ನನಗೆ ಭರವಸೆ ಕೊಡುವ ತನಕ ನಾನು ನಿಮ್ಮನ್ನು ಹೋಗಲು ಬಿಡುವುದಿಲ್ಲ. ಹಝ್ರತ್ ಉಮರ್(ರ) ಹೇಳಿದರು: ನಾವು ಯಾವುದೇ ಕಲಹವನ್ನು ಉಂಟುಮಾಡಲಾರೆ ಎಂದು ನಾನು ದೃಢವಾದ ವಾಗ್ದಾನವನ್ನು ಮಾಡುತ್ತೇನೆ. ಅನಂತರ ತೆರೆದ ಖಡ್ಗವನ್ನು ಹಿಡಿದುಕೊಂಡು ಅವರು ದಾರುಲ್ ಅರ್ಕಮಿಗೆ ಹೋಗಿ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ತೆರೆದ ಖಡ್ಗವನ್ನು ಹಿಡಿದುಕೊಂಡು ಬಾಗಿಲಿನ ಹೊರಗೆ ಹಝ್ರತ್ ಉಮರ್‌ರನ್ನು(ರ) ನಿಂತಿರುವುದಾಗಿ ನೋಡಿದ ಸಹಾಬರು ಚಿಂತಿತರಾದರು. ಬಾಗಿಲನ್ನು ತೆರೆಯಿರಿ, ಅವರು ಏನು ಮಾಡುವವರು ಎಂದು ನಾನು ನೋಡುತ್ತೇನೆ ಎಂದು ಹಝ್ರತ್ ಹಂಝ(ರ) ಹೇಳಿದರು. ಬಾಗಿಲನ್ನು ತೆರೆಯಲಾದಾಗ ಹಝ್ರತ್ ಉಮರ್(ರ) ಮುಂದಕ್ಕೆ ಧಾವಿಸಿದರು ಮತ್ತು ಅವರು ಬಂದ ಉದ್ದೇಶದ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರೊಡನೆ ಕೇಳಿದಾಗ ಅವರು ಹೀಗೆ ಹೇಳಿದರು: "ನಾನು ನಿಮ್ಮ ಸೇವಕನಾಗಲು ಹಾಜರಾಗಿದ್ದೇನೆ." ಒಂದು ಗಂಟೆಗೆ ಮುಂಚೆ ಇಸ್ಲಾಮಿನ ಕಠಿಣ ಶತ್ರುವಾಗಿದ್ದ ಮತ್ತು ಹಝ್ರತ್ ಪೈಗಂಬರ್‌ರನ್ನು(ಸ) ವಧಿಸಲು ಮನೆಯಿಂದ ಹೊರಟಿದ್ದ ಉಮರ್(ರ) ಒಂದೇ ಕ್ಷಣದಲ್ಲಿ ಉನ್ನತ ಮಟ್ಟದ ಸತ್ಯವಿಶ್ವಾಸಿಯಾಗಿ ಮಾರ್ಪಟ್ಟಿದ್ದರು. ಹಝ್ರತ್ ಉಮರ್ ಮಕ್ಕದ ಸರದಾರರಲ್ಲಿ ಸೇರಿದವರಾಗಿರಲಿಲ್ಲ. ಆದರೆ ಶೌರ್ಯದ ಕಾರಣದಿಂದ ಯುವಕರ ಎಡೆಯಲ್ಲಿ ಅವರಿಗೆ ಉತ್ತಮ ಪ್ರಭಾವವಿತ್ತು. ಅವರು ಮುಸ್ಲಿಮರಾದಾಗ ಸಹಾಬರು ಆವೇಶದಿಂದ ಅಲ್ಲಾಹು ಅಕ್ಬರ್ ಎಂದು ತಕ್ಬೀರ್ ಹೇಳಿದರು. ಅನಂತರ ನಮಾಝಿನ ಸಮಯವಾಯಿತು. ಹಝ್ರತ್ ಪೈಗಂಬರ್(ಸ) ನಮಾಝ್ ನಿರ್ವಹಿಸಿಲು ಬಯಸಿದರು. ಆಗ ಎರಡು ಗಂಟೆಗೆ ಮುಂಚೆ ಖಡ್ಗವೆತ್ತಿ ಹಝ್ರತ್ ಪೈಗಂಬರರನ್ನು(ರ) ವಧಿಸಲು ಹೊರಟಿದ್ದ ಅದೇ ಉಮರ್(ರ) ಈಗ ಖಡ್ಗವನ್ನು ಪುನಃ ಎತ್ತಿಕೊಂಡು ಹೇಳಿದರು: ಯಾ ರಸೂಲಲ್ಲಾಹ್, ಮಕ್ಕದ ಮುಶ್ರಿಕರು ಹೊರಗೆ ನಿರ್ಭೀತಿಯಿಂದ ಮೋಜು ಮಾಡುತ್ತಾ ಹೊರಡುತ್ತಿರುವಾಗ ಅಲ್ಲಾಹನ ಪ್ರವಾದಿ ಮತ್ತು ಅವರನ್ನು ನಂಬುವವರು ಅಡಗಿಕೊಂಡು ನಮಾಝ್ ನಿರ್ವಹಿಸಬೇಕೇ? ಇದು ಹೇಗೆ ಸಾಧ್ಯ? ನಮ್ಮನ್ನು ಕಅ್‌ಬ ಭವನದಲ್ಲಿ ನಮಾಝ್ ನಿರ್ವಹಿಸುವುದರಿಂದ ಯಾರು ತಡೆಯುವರು ಎಂದು ನಾನು ನೋಡುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ಆವೇಶ ಬಹಳ ಒಳ್ಳೆಯದೇ, ಆದರೆ ಈಗ ಇಂತಹ ಸ್ಥಿತಿಯಲ್ಲಿ ನಾವು ಹೊರಗೆ ಹೋಗುವುದು ಸರಿಯಲ್ಲ. (ತಫ್‌ಸೀರೆ ಕಬೀರ್ ಸಂಪುಟ–6, ಪುಟ–141–143)

ಆದರೆ ಅನಂತರ ನಾನು ಹೇಳಿದಂತೆ ಕಅ್‌ಬ ಭವನದಲ್ಲಿ ನಮಾಝ್ ಸಹ ನಿರ್ವಹಿಸಲಾಯಿತು. ಇದರ ಬಗ್ಗೆ ಮುಸ್ಲಿಹ್ ಮೌಊದ್(ರ) ಸಹ ಹೀಗೆ ಪ್ರಸ್ತಾಪಿಸಿರುವರು: ಇಸ್ಲಾಮಿನ ಆರಂಭ ಕಾಲಘಟ್ಟದಲ್ಲಿ ಮುಸ್ಲಿಮರಲ್ಲಿ ಕೇವಲ ಇಬ್ಬರು ವ್ಯಕ್ತಿಗಳನ್ನು ಶೂರರೆಂದು ಭಾವಿಸಲಾಗುತ್ತಿತ್ತು. ಒಬ್ಬರು ಹಝ್ರತ್ ಉಮರ್(ರ) ಮತ್ತು ಎರಡನೆಯದ್ದಾಗಿ ಹಝ್ರತ್ ಹಂಝ(ರ) ಇವರಿಬ್ಬರೂ ಮುಸ್ಲಿಮರಾದಾಗ, ಹಝ್ರತ್ ಪೈಗಂಬರ್‌ರೊಡನೆ(ಸ) ಹೀಗೆ ವಿನಂತಿಸಿದರು: ಮನೆಗಳಲ್ಲಿ ಅಡಗಿಕೊಂಡು ಅಲ್ಲಾಹನ ಆರಾಧನೆಯನ್ನು ಮಾಡಲು ನಾವು ಇಷ್ಟಪಡುವುದಿಲ್ಲ. ಕಅ್‌ಬ ಭವನದ ಮೇಲೆ ನಮ್ಮ ಸಹ ಹಕ್ಕು ಇರುವಾಗ ನಾವು ನಮ್ಮ ಹಕ್ಕನ್ನು ಪಡೆಯದೇ ಇರಬೇಕಾಗಿಲ್ಲ. ಬಹಿರಂಗವಾಗಿ ಆರಾಧನೆ ಮಾಡದೇ ಇರಬೇಕಾಗಿಲ್ಲ. ಸತ್ಯನಿಷೇಧಿಗಳು ಗಲಭೆಯನ್ನು ಉಂಟುಮಾಡಿ ಅಶಾಂತಿಯನ್ನು ಸೃಷ್ಟಿಸದೇ ಇರಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮನೆಯಲ್ಲೇ ನಮಾಝ್ ನಿರ್ವಹಿಸುತ್ತಿದ್ದರು. ಆದರೆ ಅವರಿಬ್ಬರ ವಿನಂತಿ ಪ್ರಕಾರ ಕಅ್‌ಬ ಭವನಕ್ಕೆ ಆರಾಧನೆ ಮಾಡಲು ಹೊರಟರು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರರ(ಸ) ಒಂದು ಕಡೆ ಹಝ್ರತ್ ಉಮರ್(ರ) ತೆರೆದ ಖಡ್ಗದೊಂದಿಗೆ ನಡೆಯುತ್ತಿದ್ದರು ಮತ್ತೊಂದೆಡೆ ಹಝ್ರತ್ ಹಂಝ ಇದ್ದರು. ಹೀಗೆ ಹಝ್ರತ್ ಪೈಗಂಬರ್(ಸ) ಕಅ್‌ಬ ಭವನದಲ್ಲಿ ಬಹಿರಂಗವಾಗಿ ನಮಾಝ್ ಅನುಷ್ಠಿಸಿದರು. (ಕುತ್‌ಬಾತೆ ಮಹ್ಮೂದ್, ಸಂಪುಟ–23, ಪುಟ–10)

ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಸುದ್ದಿ ಹರಡಿದಾಗ ಖುರೈಶಿಗಳು ತೀವ್ರವಾಗಿ ಕೋಪಗೊಂಡರು. ಇದೇ ಆವೇಶದಿಂದ ಸತ್ಯನಷೇಧಿಗಳು ಅವರ ಮನೆಗೆ ಮುತ್ತಿಗೆ ಹಾಕಿದರು. ಹಝ್ರತ್ ಉಮರ್(ರ) ಹೊರಗೆ ಬಂದರು. ಅವರ ಸುತ್ತಮುತ್ತ ಜನರ ದೊಡ್ಡದಾದೊಂದು ಜನಕೂಟ ಸೇರಿತ್ತು. ಆವೇಶಭರಿತರಾದ ಕೆಲವರು ಅವರ ಮೇಲೆ ಹಲ್ಲೆ ನಡೆಸಬಹುದಾಗಿತ್ತು. ಆದರೆ ಹಝ್ರತ್ ಉಮರ್(ರ) ಅತ್ಯಂತ ಧೈರ್ಯದಿಂದ ಅವರ ಮುಂದೆ ನಿಂತರು. ಕೊನೆಗೆ ಇಂತಹ ಸನ್ನಿವೇಶದಲ್ಲಿ ಮಕ್ಕದ ಶ್ರೇಷ್ಠ ಸರದಾರರಾದ ಆಸ್ ಬಿನ್ ವಾಯಿಲ್ ಅಲ್ಲಿಗೆ ಬಂದರು. ಏನಾಯಿತು ಎಂದು ಜನಕೂಟವನ್ನು ಕಂಡು ಅವರು ಕೇಳಿದರು. ಉಮರ್ ಸಾಬಿ ಆಗಿದ್ದಾರೆ ಎಂದು ಜನರು ಹೇಳಿದರು. ಸಂದರ್ಭೋಚಿತವಾಗಿ ತೀರ್ಮಾನವನ್ನು ಮಾಡುತ್ತಾ ಅವರು ಉಮರ್‌ರಿಗೆ(ರ) ಅಭಯ ನೀಡುವುದಾಗಿ ಘೋಷಿಸಿದರು. ಈ ಒಂದು ಘೋಷಣೆ ಮುಂದೆ ಅರೇಬಿಯರ ಪರಂಪರೆ ಪ್ರಕಾರ ಜನರು ಸುಮ್ಮನಾದರು. ಎಲ್ಲರೂ ಅಲ್ಲಿಂದ ಚದುರಿಹೋದರು. ಇದರ ನಂತರ ಹಝ್ರತ್ ಉಮರ್(ರ) ಕೆಲವು ದಿನಗಳು ಸುರಕ್ಷಿತರಾಗಿದ್ದರು. ಆದರೆ ಅವರ ಧಾರ್ಮಿಕ ಅಭಿಮಾನ ಮತ್ತು ಆವೇಶದ ಕಾರಣದಿಂದ ಅವರು ಈ ಅವಸ್ಥೆಯನ್ನು ಸಹಿಸುತ್ತಿರಲಿಲ್ಲ ಮತ್ತು ಅವರು ಆಸ್ ಬಿನ್ ಅವಾಇಲ್‌ರ ಅಭಯದಿಂದ ಹೊರಗೆ ಬಂದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಅದರ ನಂತರ ಮಕ್ಕದ ಗಲ್ಲಿಗಳಲ್ಲಿ ನನ್ನನ್ನು ಜನರು ಯಾವಾಗಲೂ ಹೊಡೆಯುತ್ತಿದ್ದರು. (ಸೀರತ್ ಖಾತಮನ್ನಬೀಈನ್, ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–159)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರಿಗೆ(ಸ) ಎಷ್ಟೆಲ್ಲ ಕಠಿಣ ಶತ್ರುಗಳಿದ್ದರು. ಆದರೆ ಅನಂತರ ಅವರಲ್ಲಿ ಎಂತಹ ಮಾರ್ಪಾಟು ಆಯಿತು ಎಂದು ನೋಡಿರಿ. ಅವರು ಸುಧಾರಣೆಗೊಂಡರು ಎಂದು ಮಾತ್ರವಲ್ಲ. ನಾವು ಮುಟ್ಟಲು ಸುಲಭವಲ್ಲದಂತಹ ಆಧ್ಯಾತ್ಮಿಕತೆಯ ಉನ್ನತ ಪದವಿಯನ್ನು ಅವರು ತಲುಪಿದರು. ಸಂಪೂರ್ಣವಾಗಿ ಪರಿವರ್ತನೆಗೊಂಡು ಹೊಸ ರೂಪವನ್ನು ಪಡೆದರು. ಇಸ್ಲಾಮಿನ ವಿರುದ್ಧ ಲಾಠಿ ಹಿಡಿದುಕೊಂಡು ಸುತ್ತಾಡುತ್ತಿದ್ದ ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ದಿನರಾತ್ರಿ ಧರ್ಮಕ್ಕಾಗಿ ತನ್ನ ಜೀವವನ್ನು ಅಪಾಯದಲ್ಲಿ ಹಾಕಲು ತೊಡಗಿದರು. ಇಸ್ಲಾಮಿನ ಸೇವೆಯಲ್ಲಿ ನಿರತರಾದರು. (ತಫ್‌ಸೀರೆ ಕಬೀರ್, ಸಂಪುಟ–7, ಪುಟ–45)

ಹಝ್ರತ್ ಉಮರರ ಇಸ್ಲಾಂ ಸ್ವೀಕಾರ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಉಮರ್‌ರಿಂದ ಎಷ್ಟೆಲ್ಲ ಪ್ರಯೋಜನವುಂಟಾಯಿತು ಎಂದು ನೋಡಿರಿ. ಒಂದು ಕಾಲದಲ್ಲಿ ಅವರು ವಿಶ್ವಾಸಿಯಾಗಿರಲಿಲ್ಲ. 4 ವರ್ಷಗಳ ತಡವಾಗಿತ್ತು. ಎಂದರೆ ಅಷ್ಟು ಕಾಲ ಅವರು ವಿಶ್ವಾಸಿಯಾಗಿರಲಿಲ್ಲ. ಅದರ ರಹಸ್ಯವೇನೆಂದು ಅಲ್ಲಾಹನೇ ಬಲ್ಲನು. ಹಝ್ರತ್ ಪೈಗಂಬರ್‌ರನ್ನು ವಧಿಸಲು ಸರಿಯಾದ ವ್ಯಕ್ತಿಯನ್ನು ಅಬೂಜಹಲ್ ಹುಡುಕುತ್ತಿದ್ದರು. ಆ ಸಮಯದಲ್ಲಿ ಹಝ್ರತ್ ಉಮರರ ಧೈರ್ಯ ಮತ್ತು ಶೌರ್ಯ ಪ್ರಸಿದ್ಧವಾಗಿತ್ತು. ಪರಸ್ಪರ ಸಮಾಲೋಚಿಸಿ ಈ ಕೆಲಸವನ್ನು ಮಾಡಲು ಉಮರ್ ತಯಾರಾದರು. ಹಝ್ರತ್ ಪೈಗಂಬರರನ್ನು(ಸ) ವಧಿಸಿದರೆ ಇಷ್ಟೆಲ್ಲ ಹಣ ಸಿಗುವುದು ಎಂಬ ಒಪ್ಪಂದದ ಮೇಲೆ ಹಝ್ರತ್ ಉಮರ್ ಮತ್ತು ಅಬೂಜಹಲ್ ಸಹಿ ಹಾಕಿದರು. ಒಂದು ಕಾಲದಲ್ಲಿ ಹಝ್ರತ್ ಪೈಗಂಬರರನ್ನು ಶಹೀದ್ ಮಾಡಲು ಹೊರಟ ಅದೇ ಉಮರ್ ಇನ್ನೊಂದು ಕಾಲದಲ್ಲಿ ಮುಸ್ಲಿಮರಾಗಿ ಸ್ವತಃ ಶಹೀದ್ ಆಗುತ್ತಾರೆ. ಎಂತಹ ವಿಸ್ಮಯಕರವಾದ ಕಾಲವಾಗಿತ್ತು. ಹೀಗೆ ಆ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದ್(ಸ) ಅವರನ್ನು ವಧಿಸುವುದರ ಬಗ್ಗೆ ಒಪ್ಪಂದವಾಗಿತ್ತು. ಈ ಒಪ್ಪಂದದ ನಂತರ ಅವರು ಪ್ರವಾದಿ(ಸ)ರವರನ್ನು ವಧಿಸಲು ರಾತ್ರಿಗಳಲ್ಲೇಲ್ಲ ಅವರು ಹುಡುಕಾಟ ನಡೆಸುತಿದ್ದರು. ಅಂದರೆ ಪ್ರವಾದಿ(ಸ)ರವರ ಹುಡುಕಾಟದಲ್ಲಿ ಹಝ್ರತ್ ಉಮರ್(ರ) ಮಗ್ನರಾಗಿದ್ದರು, ಎಲ್ಲಾದರು ಪ್ರವಾದಿ(ಸ) ಏಕಾಂಗಿಯಾಗಿ ಸಿಕ್ಕಿದರೆ ಅವರನ್ನು ವಧಿಸಬಹುದು ಎಂದು. ಅವರು ಜನರಲ್ಲಿ ಕೇಳಿದರು ಪ್ರವಾದಿ(ಸ) ಏಕಾಂಗಿಯಾಗಿ ಎಲ್ಲಿ ಸಿಗಬಹುದು ಎಂದು. ಅದಕ್ಕೆ ಅರ್ಧ ಜನರು ಹೇಳಿದರು ರಾತ್ರಿ ಕಳೆದ ನಂತರ ಅವರು ಖಾನ ಕಅಬದಲ್ಲಿ ನಮಾಝ್ ನಿರ್ವಹಿಸುತ್ತಾರೆ. ಇದನ್ನು ಆಲಿಸಿ ಹಝ್ರತ್ ಉಮರ್(ರ) ಬಹಳ ಸಂತೋಷಗೊಳ್ಳುತ್ತಾರೆ.ಹೀಗೆ ಅವರು ಖಾನ ಕಅಬದಲ್ಲಿ ಬಂದು ಬಚ್ಚಿ ಕೂತಿದ್ದರು. ಕೆಲವು ಕ್ಷಣಗಳ ನಂತರ ಕಾಡಿನಿಂದ **ಲಾಇಲಾಹ ಇಲ್ಲಲ್ಲಾಹು** ಎಂದು ಶಬ್ಧ ಕೇಳಿ ಬಂತು ಅದು ಪ್ರವಾದಿ ಮುಹಮ್ಮದ್(ಸ)ರವರ ಧ್ವನಿ

ಎಂದು ಸ್ಪಷ್ಟವಾಯಿತು. ಆ ಧ್ವನಿನ್ನು ಕೇಳಿ ಹಝ್ರತ್ ಉಮರ್(ರ) ಆ ಧ್ವನಿಯ ಕಡೆಗೆ ಧಾವಿಸಿ ಪ್ರವಾದಿ(ಸ)ರವರು ಸಜದ ಮಾಡಿದಾಗ ಅವರ ಶಿರವನ್ನು ಕತ್ತರಿಸಿ ದೇಹದಿಂದ ಬೇರ್ಪಡಿಸುವೆನು ಎಂದು ಭಾವಿಸಿದರು. ಪ್ರವಾದಿ(ಸ) ಬಂದ ತಕ್ಷಣವೇ ನಮಾಝ್ ಪ್ರಾರಂಭಿಸಿದರು. ತದನಂತರದ ಘಟನೆಯನ್ನು ಸ್ವತಃ ಹಝ್ರತ್ ಉಮರ್(ರ) ವಿವರಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅದರ ಮುಂದಿನ ಘಟನೆಯನ್ನು ಸ್ವತಃ ಹಝ್ರತ್ ಉಮರ್(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಸಜದದಲ್ಲಿ ಬಹಳ ಭಾವುಕರಾಗಿ ಅಳುತ್ತ ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಿದನ್ನು ಕಂಡು ನನ್ನ ವೇಲೆ ಅದರ ಭೀಕರವಾದ ಪ್ರಭಾವವೂ ಬೀರಿತು, ಪ್ರವಾದಿ(ಸ) ಹೀಗೂ ಸಹ ಹೇಳಿದರು **ಸಜದ ಲಕ ರೂಹಿ ವ ಜನಾನಿ** ಅಂದರೆ ಓ ಅಲ್ಲಾಹನೇ! ನನ್ನ ಆತ್ಮ ಮತ್ತು ನನ್ನ ಹೃದಯವೂ ಸಹ ನಿನಲ್ಲಿ ಸಜದ ಮಾಡಿದೆ. ಹಝ್ರತ್ ಉಮರ್(ರ) ಹೇಳುತ್ತಾರೆ ಆ ಪ್ರಾರ್ಥನೆಯನ್ನು ಕೇಳಿ ನನ್ನ ಮನಸ್ಸು ಮೃದುವಾಯಿತು. ಕೊನೇಗೆ ನನ್ನ ಕೈಯಿಂದ ಸತ್ಯದ ಭೀತಿಯಿಂದ ಖಡ್ಗವು ಜಾರಿತು. ನಾನು ಅವರ ಈ ಸ್ಥಿತಿಯನ್ನು ಕಂಡು ಈತನು ಸತ್ಯವಂತ ಎಂದು ಅರಿತುಕೊಂಡೆನು ಮತ್ತು ಈತನು ಅವಶ್ಯಕವಾಗಿ ಯಶಸ್ವಿಯಾಗುವನು ಎಂದು ಅರ್ಥವಾಯಿತು ಆದರೆ ದುಷ್ಪ್ರೇರಕ ಆತ್ಮವೂ ಕೆಟ್ಟದಾಗಿರುತ್ತದೆ. ಪ್ರವಾದಿ(ಸ) ನಮಾಝ್ ನಿರ್ವಹಿಸಿದ ನಂತರ ಹೊರಹೋದಾಗ ನಾನು ಅವರನ್ನು ಹಿಂಬಾಲಿಸಿದೆ. ರಾತ್ರಿಯ ಕತ್ತಲ್ಲಿ ಅವರಿ ನನ್ನ ಹೆಜ್ಜೆಯ ಸಪ್ಪಳವನ್ನು ಕೇಳಿದಾಗ ಪ್ರವಾದಿ(ಸ) ಯಾರು ಎಂದು ಕೇಳಿದರು. ಅದಕ್ಕೆ ನಾನು ಉತ್ತರಿಸಿದೆ ನಾನು ಉಮರ್. ಅದಕ್ಕೆ ಪ್ರವಾದಿ(ಸ) ಹೇಳಿದರು ಎಲ್ಯೆ ಉಮರ್ ನೀನು ನನಗೆ ರಾತ್ರಿ ಹೊತ್ತಲು ಬಿಡುವುದಿಲ್ಲ ಮತ್ತು ಹಗಲ ಹೊತ್ತಲ್ಲು ಬಿಡುವುದಿಲ್ಲ. ಆ ಸಂದರ್ಭದಲ್ಲಿ ನನಗೆ ಪ್ರವಾದಿ(ಸ)ರವರ ಆತ್ಮದ ಸುವಾಸನೆಯು ಬಂದಿತು ಮತ್ತು ನನ್ನ ಆತ್ಮವೂ ಪ್ರವಾದಿ ಮುಹಮ್ಮದ್(ರ) ರವರು ಶಪಿಸುವರು ಎಂದು ಭಾವಿಸಿತು. ಅದಕ್ಕೆ ನಾನು ಉತ್ತರಿಸಿದೆ: ಎಲ್ಯೆ ಮಹಾನೀಯರೇ!! ನನ್ನನ್ನು ಶಪಿಸದಿರಿ, ಹಝ್ರತ್ ಉಮರ್ ಹೇಳುತ್ತಾರೆ ಆ ಗಳಿಗೆಯು ನನ್ನ ಇಸ್ಲಾಮಿನ ಗಳಿಗೆಯಾಗಿತ್ತು. ಎಲ್ಲಿಯವರೆಗು ಎಂದರೆ ಅಲ್ಲಾಹನು ನನಗೆ ಮುಸಲ್ಮಾನನಾಗಲು ಅನುಗ್ರಹಿಸಿದನು."
(ಮಲ್‌ಫೂಝಾತ್, ಸಂಪುಟ–2, ಪುಟ–180–181)

ಇದೊಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವರದಿ ಆಗಿದೆ ಇನ್ನೊಂದೆಡೆ ಅವರು ಮತ್ತೊಮ್ಮೆ ಅದನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ: ಹಝ್ರತ್ ಉಮರ್(ರ) ಅಬೂಜಹಲ್‌ನೊಂದಿಗೆ ಇಸ್ಲಾಮ್ ಸ್ವೀಕರಿಸುವುದಕ್ಕು ಮುಂಚೆ ಭೇಟಿಯಾಗುತ್ತಿದ್ದರು. ಒಮ್ಮೆ ಅಬೂಜಹಲ್ ಪ್ರವಾದಿ ಮುಹಮ್ಮದ್(ಸ)ರವರನ್ನು ವದಿಸಬೇಕು ಎಂದು ತೀರ್ಮಾನಿಸಿದನು ಮತ್ತು ವಧಿಸಿದವನಿಗೆ ಉಡುಗೀರೆಯನ್ನು ಸಹ ನಿಶ್ಚಯಿಸಿದನು. ಹಝ್ರತ್ ಉಮರ್(ರ) ಈ ಕೆಲಸಕ್ಕಾಗಿ ಆಯ್ಕೆಯಾದರು. ಹೀಗಾಗು ಅವರು ತಮ್ಮ ಖಡ್ಗವನ್ನು ಸಿದ್ಧಗೊಳಿಸಿದರು. ಹಝ್ರತ್ ಉಮರ್‌ರವರಿಗೆ ಕೊನೆಗೆ ತಿಳಿಯಿತು ಪ್ರವಾದಿ(ಸ)ರವರು  ತಡರಾತ್ರಿ ನಮಾಝ್ ನಿರ್ವಹಿಸಲು ಖಾನ ಕಅಬಕ್ಕೆ ಬರುವರು ಎಂದು. ಆದ್ದರಿಂದ ಅವರು ಖಾನ ಕಅಬದಲ್ಲಿ ಬಂದು ಬಚ್ಚಿ ಕೂತಿದ್ದರು. ಕೆಲವು ಕ್ಷಣಗಳ ನಂತರ ಕಾಡಿನಿಂದ **ಲಾಇಲಾಹ ಇಲ್ಲಲ್ಲಾಹು** ಎಂದು ಶಬ್ಧ ಕೇಳಿ ಬಂತು ಅದು ಪ್ರವಾದಿ ಮುಹಮ್ಮದ್(ಸ)ರವರ ಧ್ವನಿ ಎಂದು ಸ್ಪಷ್ಟವಾಯಿತು. ಆ ಧ್ವನಿನ್ನು ಕೇಳಿ ಹಝ್ರತ್ ಉಮರ್(ರ) ಆ ಧ್ವನಿಯ ಕಡೆಗೆ ಧಾವಿಸಿ ಪ್ರವಾದಿ(ಸ)ರವರು ಸಜದ ಮಾಡಿದಾಗ ಅವರ ಶಿರವನ್ನು ಕತ್ತರಿಸಿ ದೇಹದಿಂದ ಬೇರ್ಪಡಿಸುವೆನು ಎಂದು ಭಾವಿಸಿದರು. ಪ್ರವಾದಿ(ಸ) ಖಾನ ಕಅಬದಲ್ಲಿ ಪ್ರವೇಶಿಸಿದ ತಕ್ಷಣವೇ ನಮಾಝ್ ಪ್ರಾರಂಭಿಸಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಸಜದದಲ್ಲಿ ಬಹಳ ಭಾವುಕರಾಗಿ ಅಳುತ್ತ ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಿದನ್ನು ಕಂಡು ನನ್ನ ವೇಲೆ ಅದರ ಭೀಕರವಾದ ಪ್ರಭಾವವೂ ಬೀರಿತು, ಪ್ರವಾದಿ(ಸ) ಹೀಗೂ ಸಹ ಹೇಳಿದರು **ಸಜದ ಲಕ ರೂಹಿ ವ ಜನಾನಿ** ಅಂದರೆ ಓ ಅಲ್ಲಾಹನೇ! ನನ್ನ ಆತ್ಮ ಮತ್ತು ನನ್ನ ಹೃದಯವೂ ಸಹ ನಿನಲ್ಲಿ ಸಜದ ಮಾಡಿದೆ. ಹಝ್ರತ್ ಉಮರ್(ರ) ಹೇಳುತ್ತಾರೆ ನಾನು ಅದರಿಂದ ನಡುಗಿ ಹೋದೆನು. ಆ ಪ್ರಾರ್ಥನೆಗಳನ್ನು ಆಲಿಸಿಕೊಂಡು ನನ್ನ ಕರುಳು ಕರಗಿ ಹೋಗುತ್ತಿತ್ತು. ಕೊನೆಗೆ ಸತ್ಯದ ಪ್ರತಾಪದ ಕಾರಣದಿಂದ ನನ್ನ ಕೈಯಿಂದ ಖಡ್ಗ ಜಾರಿ ಬಿತ್ತು. ಹಝ್ರತ್ ಪೈಗಂಬರರ(ಸ) ಈ ಸ್ಥಿತಿಯನ್ನು ಕಂಡು ಅವರು ಸತ್ಯವಂತರು ಮತ್ತು ಅವರು ಖಂಡಿತ ವಿಜಯಿಯಾಗುವರು ಎಂದು ನನಗೆ ಅರಿವಾಯಿತು ಆದರೆ ದುಷ್ಪ್ರೇರಕ ಆತ್ಮವೂ ಕೆಟ್ಟದಾಗಿರುತ್ತದೆ. ಪ್ರವಾದಿ(ಸ) ನಮಾಝ್ ನಿರ್ವಹಿಸಿದ ನಂತರ ಹೊರಹೋದಾಗ ನಾನು ಅವರನ್ನು ಹಿಂಬಾಲಿಸಿದೆ. ರಾತ್ರಿಯ ಕತ್ತಲ್ಲಿ ಅವರಿ ನನ್ನ ಹೆಜ್ಜೆಯ ಸಪ್ಪಳವನ್ನು ಕೇಳಿದಾಗ ಪ್ರವಾದಿ(ಸ) ಯಾರು ಎಂದು ಕೇಳಿದರು. ಅದಕ್ಕೆ ನಾನು ಉತ್ತರಿಸಿದೆ ನಾನು ಉಮರ್. ಅದಕ್ಕೆ ಪ್ರವಾದಿ(ಸ) ಹೇಳಿದರು ಎಲ್ಯೆ ಉಮರ್ ನೀನು ನನಗೆ ರಾತ್ರಿ ಹೊತ್ತಲು ಬಿಡುವುದಿಲ್ಲ ಮತ್ತು ಹಗಲ ಹೊತ್ತಲ್ಲು ಬಿಡುವುದಿಲ್ಲ. ಆ ಸಂದರ್ಭದಲ್ಲಿ ನನಗೆ ಪ್ರವಾದಿ(ಸ)ರವರ ಆತ್ಮದ ಸುವಾಸನೆಯು ಬಂದಿತು ಮತ್ತು ನನ್ನ ಆತ್ಮವೂ ಪ್ರವಾದಿ ಮುಹಮ್ಮದ್(ರ) ರವರು ಶಪಿಸುವರು ಎಂದು ಭಾವಿಸಿತು ಆದ್ದರಿಂದ ನಾನು ಹೇಳಿದೆ ಇಂದಿನಿಂದ ನಾನು ಯಾವತ್ತು ನಿಮ್ಮನ್ನು ತೊಂದರೆ ನೀಡುವುದಿಲ್ಲ. ಅರಬರಲ್ಲಿ ವಾಗ್ದಾನದ ಮಹತ್ವವೂ ಬಹಳ ಇರುವುದರಿಂದ ಪ್ರವಾದಿ(ಸ)ರವರು ಅವರ ವಾಗ್ದಾನವನ್ನು ಒಪ್ಪಿಕೊಂಡರು. ಪ್ರವಾದಿ(ಸ)ರವರ ಮನಸ್ಸಿನಲ್ಲಿ ಅಲ್ಲಾಹನು ಈತನನ್ನು ವ್ಯರ್ಥಗೊಳಿಸುವುದಿಲ್ಲ ಎಂದು ಹೇಳಿದನು. ಕೊನೆಗೆ ಉಮರ್(ರ) ಮುಸ್ಲಿಮರಾದರು. ಅನಂತರ ಅಬೂಜಹಲ್ ಮತ್ತು ಇಸ್ಲಾಮಿನ ಇತರ ವಿರೋಧಿಗಳೊಂದಿಗೆ ಅವರಿಗೆ ಇದ್ದ ಸ್ನೇಹಬಂಧ ಮತ್ತು ಸಂಬಂಧ ಕ್ಷಣದಲ್ಲಿ ಮುರಿದುಹೋಯಿತು. ಅವುಗಳ ಜಾಗದಲ್ಲಿ ಒಂದು ಹೊಸ ಸಹೋದರ ಸಂಬಂಧ ಸ್ಥಾಪಿತವಾಯಿತು. ಹಝ್ರತ್ ಅಬೂಬಕರ್(ರ) ಮತ್ತು ಇತರ ಸಹಾಬಿಯರು ಅವರಿಗೆ ಲಭಿಸಿತು. ಅನಂತರ ಅವರ ಹಳೆಯ ಸಂಬಂಧದ ಬಗ್ಗೆ ಅವರಿಗೆ ಆಲೋಚನೆ ಕೂಡ ಉಂಟಾಗಲಿಲ್ಲ.
(ಮಲ್‌ಫೂಝಾತ್, ಸಂಪುಟ–3, ಪುಟ–340)

ಇನ್ನೊಂದೆಡೆ ಹಝ್ರತ್ ಉಮರ್(ರ)ರವರ ಇಸ್ಲಾಮ್ ಸ್ವೀಕರಿಸಿದ ಘಟನೆಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೀಗೆ ಹೇಳುತ್ತಾರೆ: ಹಝ್ರತ್ ಉಮರ್(ರ)ರವರು ಪ್ರವಾದಿ(ಸ)ರವರನ್ನು ವಧಿಸುವುದಕ್ಕಾಗಿ ಹೋಗುವುದರ ಬಗ್ಗೆ ನಿಮಗೆ ತಿಳಿದಿದೆ, ಅಬೂಜಹಲ್ ಒಂದು ಜಾಹಿರಾತನ್ನು ನೀಡಿದ್ದನು ಯಾರು ಪ್ರವಾದಿ(ಸ)ರವರವು ವಧಿಸುತ್ತಾನೋ ಆತನನ್ನು ಹಣವನ್ನು ಉಡೊಗೋರೆಯನ್ನಾಗಿ ನೀಡಲಾಗುವುದು ಎಂದು. ಹಝ್ರತ್ ಉಮರ್ ಇಸ್ಲಾಮ್ ಸ್ವೀಕರಿಸುವುದಕ್ಕು ಮುಂಚೆ ಅಬೂಜಹಲ್‌ನೊಂದಿಗೆ ಒಪ್ಪಂದವಾಗಿತ್ತು ಅವರು ಪ್ರವಾದಿ(ಸ)ರವರನ್ನು ವಧಿಸುವರು ಎಂದು ಒಪ್ಪಿಕೊಂಡಿದ್ದರು. ಹಝ್ರತ್ ಉಮರ್(ರ) ರವರನ್ನು ಈ ಕೆಲಸ ಕೈಗೊಳ್ಳಲು ಉತ್ತಮ ಅವಕಾಶಕ್ಕಾಗಿ ಕಾಯುತ್ತಿದ್ದರು. ಹಝ್ರತ್ ಉಮರ್‌ರವರಿಗೆ ಕೊನೆಗೆ ತಿಳಿಯಿತು ಪ್ರವಾದಿ(ಸ)ರವರು  ತಡರಾತ್ರಿ ನಮಾಝ್ ನಿರ್ವಹಿಸಲು ಖಾನ ಕಅಬಕ್ಕೆ ಬರುವರು ಎಂದು. ಆದ್ದರಿಂದ ಅವರು ಖಾನ ಕಅಬದಲ್ಲಿ ಬಂದು ಬಚ್ಚಿ ಕೂತಿದ್ದರು. ಕೆಲವು ಕ್ಷಣಗಳ ನಂತರ ಕಾಡಿನಿಂದ **ಲಾಇಲಾಹ ಇಲ್ಲಲ್ಲಾಹು** ಎಂದು ಶಬ್ಧ ಕೇಳಿ ಬಂತು ಅದು ಪ್ರವಾದಿ ಮುಹಮ್ಮದ್(ಸ)ರವರ ಧ್ವನಿ ಎಂದು ಸ್ಪಷ್ಟವಾಯಿತು. ಆ ಧ್ವನಿನ್ನು ಕೇಳಿ ಹಝ್ರತ್ ಉಮರ್(ರ) ಆ ಧ್ವನಿಯ ಕಡೆಗೆ ಧಾವಿಸಿ ಪ್ರವಾದಿ(ಸ)ರವರು ಸಜದ ಮಾಡಿದಾಗ ಅವರ ಶಿರವನ್ನು ಕತ್ತರಿಸಿ ದೇಹದಿಂದ ಬೇರ್ಪಡಿಸುವೆನು ಎಂದು ಭಾವಿಸಿದರು. ಪ್ರವಾದಿ(ಸ) ಖಾನ ಕಅಬದಲ್ಲಿ ಪ್ರವೇಶಿಸಿದ ತಕ್ಷಣವೇ ನಮಾಝ್ ಪ್ರಾರಂಭಿಸಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ) ಸಜದದಲ್ಲಿ ಬಹಳ ಭಾವುಕರಾಗಿ ಅಳುತ್ತ ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಿದನ್ನು ಕಂಡು ನನ್ನ ವೇಲೆ ಅದರ ಭೀಕರವಾದ ಪ್ರಭಾವವೂ ಬೀರಿತು, ಆ ಪ್ರಾರ್ಥನೆಯನ್ನು ಕೇಳಿ ಅವರ ಮನಸ್ಸು ಮೃದುವಾಯಿತು. ಕೊನೇಗೆ ಅವರ ಕೈಯಿಂದ ಸತ್ಯದ ಭೀತಿಯಿಂದ ಖಡ್ಗವು ಜಾರಿತು. ಪ್ರವಾದಿ(ಸ) ನಮಾಝ್ ನಿರ್ವಹಿಸಿದ ನಂತರ ಹೊರಹೋದಾಗ ನಾನು ಅವರನ್ನು ಹಿಂಬಾಲಿಸಿದೆ. ರಾತ್ರಿಯ ಕತ್ತಲ್ಲಿ ಅವರಿ ನನ್ನ ಹೆಜ್ಜೆಯ ಸಪ್ಪಳವನ್ನು ಕೇಳಿದಾಗ ಪ್ರವಾದಿ(ಸ) ಯಾರು ಎಂದು ಕೇಳಿದರು. ಅದಕ್ಕೆ ನಾನು ಉತ್ತರಿಸಿದೆ ನಾನು ಉಮರ್. ಅದಕ್ಕೆ ಪ್ರವಾದಿ(ಸ) ಹೇಳಿದರು ಎಲ್ಯೆ ಉಮರ್ ನೀನು ನನಗೆ ರಾತ್ರಿ ಹೊತ್ತಲು ಬಿಡುವುದಿಲ್ಲ ಮತ್ತು ಹಗಲ ಹೊತ್ತಲ್ಲು ಬಿಡುವುದಿಲ್ಲ. ಆ ಸಂದರ್ಭದಲ್ಲಿ ನನಗೆ ಪ್ರವಾದಿ(ಸ)ರವರ ಆತ್ಮದ ಸುವಾಸನೆಯು ಬಂದಿತು ಮತ್ತು ನನ್ನ ಆತ್ಮವೂ ಪ್ರವಾದಿ ಮುಹಮ್ಮದ್(ರ) ರವರು ಶಪಿಸುವರು ಎಂದು ಭಾವಿಸಿತು. ಹೀಗೆ ಹಝ್ರತ್ ಹೇಳುತ್ತಿದ್ದರು ಆ ಮೊದಲ ರಾತ್ರಿಯಾಗಿತ್ತು ನನ್ನ ಮನಸ್ಸಿನಲ್ಲಿ ಇಸ್ಲಾಮ್ ಧರ್ಮಕ್ಕಗಿ ಪ್ರೀತಿ ಹುಟ್ಟಿತು.
(ಮಲ್ಫೂಝಾತ್, ಸಂಪುಟ–7, ಪುಟ–61)

ಇದನ್ನು ತಿಳಿಸಲು ಈಗ ನಾನು ಮೂರು ಬೇರೆ ಬೇರೆ ಉಲ್ಲೇಖಗಳನ್ನು ಪ್ರಸ್ತಾಪಿಸಿರುವೆನು. 1 ಜನವರಿ 1905, 1 ಆಗಷ್ಟ್ 1902, ಹಾಗೂ 1 ಜೂನ್ 1904 ಅಥವಾ 1907ರದ್ದಾಗುದೆ. ಏನೇ ಇರಲಿ ಈ ಮೂರೂ ಕಡೆಗಳಲ್ಲಿ ರಾತ್ರಿ ಸಮಯದಲ್ಲಿ ಕಅ್‌ಬ ಭವನದಲ್ಲಿ ಹಲ್ಲೆ ನಡೆಸಿದ ಘಟನೆಯ ಪ್ರಸ್ತಾಪವಿದೆ. ಆ ರಾತ್ರಿಯ ಘಟನೆಯ ನಂತರ ಸಹ ಆತ್ಮದ ದುಷ್ಪ್ರೇರಣೆಗೆ ಒಳಗಾಗಿ ಬೆಳಗ್ಗಿನ ಸಮಯದಲ್ಲೂ ಅವರು ಹಲ್ಲೆ ನಡೆಸಲು ಹೊರಟಿರಬಹುದು. ಹೀಗೆ ಸಹೋದರಿ ಮತ್ತು ಅಳಿಯನಿಗೆ ಸಂಬಂಧಿಸಿದ ಘಟನೆ ನಡೆದಿರಬಹುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೇಳುತ್ತಾರೆ: "ಅಬೂಜಹಲ್‌ನನ್ನು ಫಿರ್‌ಔನ್ ಎಂದು ಹೇಳಲಾಗಿದೆ ಆದರೆ ನನ್ನ ಪ್ರಕಾರ ಆತನು ಫಿರ್‌ಔನ್‌ನಿಂದನು ಹೇಚ್ಚಾಗಿದ್ದಾನೆ ಏಕೆಂದರೆ ಫಿರ್‌ಔನ್ ಕೊನೇಗೆ **ಆಮನ್‌ತು ಅನ್ನಹೂ ಲಾಇಲಾಹ ಇಲ್ಲಲ್ಲಝಿ ಆಮನತ್ ಬಿಹೀ ಬನೂ ಇಸ್ರಾಈಲ** (ಯೂನುಸ್:91) ಆದರೆ ಈತನು ಕೊನೆಯವರೆಗೂ ಈಮಾನ್ ತರಲಿಲ್ಲ

ಮಕ್ಕದಲ್ಲಿ ಸಕಲ ಪಿತೂರಿತನಕ್ಕೆ ಈತನೇ ಕಾರಣ ಮತ್ತು ದೊಡ್ಡ ಅಹಂಕಾರಿ, ಸ್ವಾರ್ಥಿಯಾಗಿದ್ದನು. ಆತನ ನೈಜನಾಮ ಉಮ್ರೋ ಎಂದಾಗಿತ್ತು ಮತ್ತು ಈ ಇಬ್ಬರು ಉಮರ್‌ರವರು ಮಕ್ಕದಲ್ಲಿದ್ದರು, ಅಲ್ಲಾಹನ ಇಚ್ಛೆಯು ಒಂದು ಉಮರನ್ನು ತನ್ನ ಕಡೆ ಕರೆದುಕೊಂಡನು ಇನ್ನೊಬ್ಬನನ್ನು ಹಾಗೇ ಬಿಟ್ಟನು ಆತನ ಆತ್ಮವೂ ನರಕದಲ್ಲಿ ಸುಡುತ್ತಿರಬಹುದು ಮತ್ತು ಹಝ್ರತ್ ಉಮರ್(ರ) ರವರು ಹಟ ಬಿಟ್ಟಿದಾಗ ರಾಜನಾದರು. **(ಮಲ್‌ಫೂಝಾತ್, ಸಂಪುಟ–4, ಪುಟ–247)**

ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡುತ್ತಾ ಮೂರು ಬಾರಿ ಹಝ್ರತ್ ಉಮರರ(ರ) ಎದೆಯಲ್ಲಿ ಕೈಯನ್ನು ಸವರಿದರು: **ಅಲ್ಲಾಹುಮ್ಮ ಅಖ್ರಿಜ್ ಮಾ ಫೀ ಸದರಿಹೀ ಮಿನ್ ಗಿಲ್ಲಿನ್, ವ ಅಬ್‌ದಿಲ್‌ಹೂ ಈಮಾನ** –"ಅವರ ಹೃದಯದಲ್ಲಿ ಇರುವ ಹಗೆಯನ್ನು ದೂರಮಾಡು ಮತ್ತು ಅದನ್ನು ಸತ್ಯವಿಶ್ವಾಸವಾಗಿ ಬದಲಿಸು." (ಅಲ್‌ಇಸ್ತಿಆಬ್ ಫೀ ಮಾರಿಫತಲ್ ಅಸ್ಹಾಬ್, ಭಾಗ–3, ಪುಟ–237, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2002)

ನಾವು ಹಝ್ರತ್ ಉಮರ್(ರ)ರವರ ಇಸ್ಲಾಮ್ ಸ್ವೀಕರಿಸುವುದಕ್ಕು ಮುಂಚೆಯ ಜೀವನವನ್ನು ನೋಡಿರುವೆವು ಹಝ್ರತ್ ಉಮರ್ ಇಸ್ಲಾಮ್ ಸ್ವೀಕರಿಸುವುದಕ್ಕು ಮುಂಚೆ ಅವರು ಇಸ್ಲಾಮ್‌ನ ಕಡು ವಿರೋಧಿ ಆಗಿದ್ದರು ನಂತರ ನೀವು ಇಸ್ಲಾಮ್ ಸ್ವೀಕರಿಸಿದರು ನಿಮ್ಮ ಇಸ್ಲಾಮ್ ಸ್ವೀಕರಣವೇ ಮುಸ್ಲಿಮರ ವಿಜಯ ಮತ್ತು ತೊಂದರೆಗಳಿಂದ ಮುಕ್ತಿ ಆಗಿತ್ತು. ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್(ರ) ಹೇಳುತ್ತಾರೆ: ನಾವು ಹಝ್ರತ್ ಉಮರ್(ರ) ಇಸ್ಲಮ್ ಸ್ವೀಕರಿಸುವುದಕ್ಕು ಮುಂಚೆ ಬಹಿರಂಗವಾಗಿ ಅಲ್ಲಾಹನ ಆರಾಧನೆ ಮಾಡಿರಲಿಲ್ಲ. (ಅಲ್‌ಅಸಾಬ ಫೀ ತಮೀಝುಸ್ಸಹಾಬ ಭಾಗ–4, ಪುಟ–484, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಅಬ್ದುರ್ರಹ್ಮಾನ್ ಬಿನ್ ಹಾರಿಸ್(ರ) ಹೇಳುತ್ತಾರೆ ಹಝ್ರತ್ ಉಮರ್(ರ) ಹೇಳಿದರು ನಾನು ಇಸ್ಲಾಮ್ ಸ್ವೀಕರಿಸಿದ ರಾತ್ರಿ ಯೋಚಿಸಿದೆ ಮಕ್ಕದ ಜನರಲ್ಲಿ ಪ್ರವಾದಿ(ಸ)ರವರ ವಿರೋಧಿಗಳಲ್ಲಿ ಅತೀ ಹೆಚ್ಚು ವಿರೋಧ ವ್ಯಕ್ತಿಸುವವರು ಯಾರು ಆತನ ಬಳಿ ನಾನು ಹೋಗಿ ಈಗ ನಾನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದೇನೆ ಎಂದು ಹೇಳುವೆನು. ಹಝ್ರತ್ ಉಮರ್(ರ) ಹೇಳುತ್ತಾರೆ: ನಾನು ಆತನು ಅಬೂಜಹಲ್ ಎಂದು ಯೋಚಿಸಿ ಮುಂಜಾನೆಯಾದಾಗ ಆತನ ಬಳಿ ನಾನು ಹೋಗಿ ಆತನ ಮನೆಯ ಬಾಗಿಲನ್ನು ತಟ್ಟಿದೆ. ಆಗ ಅಬೂಜಹಲ್ ನನ್ನ ಬಳಿ ಬಂದು ಹೇಳಿದನು: ಓ ನನ್ನ ಸೋದರಳಿಯನೇ ಸ್ವಾಗತ, ನೀನೇಕ ಬಂದಿರುವೇ? ಅಸಕ್ಕೆ ಹಝ್ರತ್ ಉಮರ್(ರ) ಹೇಳಿದರು ನಾನು ನಿಮನ್ನು ನಾನು ಅಲ್ಲಾಹ್ ಹಾಗೂ ಅಲ್ಲಹನ ಪ್ರವಾದಿ(ಸ)ರವರ ಮೇಲೆ ಈಮಾನ್ ತಂದಿರುವೆನು ಮತ್ತು ಅವರು ತಂದಿರುವುದನ್ನು ದೃಢೀಕರಿಸಿದ್ದೇನೆ ಎಂದು ತಿಳಿಸಲು ಬಂದಿರುವೆನು. ಹಝ್ರತ್ ಉಮರ್ ಹೇಳುತ್ತಾರೆ ಆತನು ನನ್ನ ಮೇಲೆ ಬಾಗಿಲು ಮುಚ್ಚಿ ಹೇಳಿದನು ಅಲ್ಲಾಹನು ನಿನ್ನನ್ನು ಮತ್ತು ನೀನು ತಂದಿರುವುದನ್ನು ವ್ಯರ್ಥಗೊಳಿಸಲಿ.
(ಸೀರತ್ ಇಬ್ನೆ ಹಿಶ್ಯಮ್, ಪುಟ–162, ದಾರ್ ಇಬ್ನೆ ಹಝುಮ್ ಬೈರೂತ್ 2009)

ಇದು ಅಬೂಜಹಲ್‌ನ ಪದಗಳಾಗಿವೆ.

ಹಝ್ರತ್ ಇಬ್ನೆ ಉಮರ್ ಹೇಳುತ್ತಾರೆ ನನ್ನ ತಂದೆ ಹಝ್ರತ್ ಉಮರ್(ರ)ರವರು ಇಸ್ಲಾಮ್ ಸ್ವೀಕರಿಸಿದಾಗ ಅವರು ಜನರಲ್ಲಿ ಕೇಳಿದರು ಖುರೈಶರಲ್ಲಿ ಹೆಚ್ಚು ಸುದ್ದಿಗಳನ್ನು ಹರಡಿಸುವರು ಯಾರು? ಆನರು ಹೇಳಿದರು ಜಮೀಲ್ ಬಿನ್ ಮಮರ್ ಜುಮ್‌ಹಿ ಎಂದು ಹೇಳಿದರು. ಹಝ್ರತ್ ಇಬ್ನೆ ಉಮರ್ ಹೇಳುತ್ತಾರೆ: ಹಝ್ರತ್ ಉಮರ್(ರ) ಮುಂಜಾನೆಯೇ ಆತನ ಬಳಿ ಹೋದರು ನಾನು ಸಹ ಅವರೊಂದಿಗೆ ಅವರನ್ನು ಹಿಂಬಾಲಿಸಿದೆ ನಾನು ಅವರು ಏನು ಮಾಡುತ್ತಾರೆ ಎಂದು ನೋಡುತ್ತಿದ್ದೆ ನಾನು ಚಿಕ್ಕ ಪ್ರಯದವನಾಗಿದ್ದೆ ಆದರೂ ನಾನು ಎಲ್ಲವನ್ನು ಅರಿತುಕೊಳ್ಳುತ್ತಿದ್ದೆ ಎಂದು ಇಬ್ನೆ ಉಮರ್ ಹೇಳುತ್ತಿದ್ದರು. ಹಝ್ರತ್ ಉಮರ್(ರ) ಆ ವ್ಯಕ್ತಿಯ ಬಳಿ ಹೋಗಿ ಹೇಳಿದರು ಎಲ್ಯೆ ಜಮೀಲ್! ನಿನಗೆ ಅರಿವಿದೆಯೇ ನಾನು ಇಸ್ಲಾಮ್ ಸ್ವೀಕರಿಸಿದ್ದೇನೆ ಮತ್ತು ಪ್ರವಾದಿ ಮುಹಮ್ಮದ್(ಸ)ರವರ ಧರ್ಮವನ್ನು ಸ್ವೀಕರಿಸಿದ್ದೇನೆ ಎಂದು. ಹಝ್ರತ್ ಇಬ್ನೆ ಉಮರ್ ಹೇಳುತ್ತಾರೆ: ಅಲ್ಲಾಹನಾಣೆ! ಹಝ್ರುತ್ ಉಮರ್(ರ) ಈ ಮಾತನ್ನು ಮತ್ತೊಮ್ಮೆ ಹೇಳಲಿಲ್ಲ ಅಷ್ಟರಲ್ಲಿ ಆತನು ತನ್ನ ಅಂಗಿಯನ್ನು ಯಳೆಯುತ್ತ ಓಡಿಹೋದನು ಹಝ್ರತ್ ಉಮರ್(ರ)ರವರು ಸಹ ಆತನನ್ನು ಹಿಂಬಾಲಿಸಿದರು ಅವನು ಖಾನಕಅಬದ ಬಾಗಿಲಲ್ಲಿ ನಿಂತು ಜೋರಾಗಿ ಹೇಳಿದನು ಎಲ್ಯೆ ಖುರೈಶರೆ!! ಆತನು ಕಅಬದ ಬಾಗಿಲಲ್ಲಿ ನಿಂತು ಹೀಗೆ ಘೋಷಿಸಿದನು ಎಲ್ಯೆ ಖುರೈಶರೇ!! ಮಕ್ಕದ ಹತ್ತಿರ ಇದ್ದ ಜನರೆಲ್ಲರು ಅತನ ಕಡೆ ಗಮನವಹಿಸಿದರು. ಆತನು ಹೇಳಿದನು ಕೇಳೀರೀ ಉಮರ್ ಬಿನ್ ಖತ್ತಾಬ್(ರ) ನಾಸ್ತಿಕ(ಸಾಬಿ) ಆಗಿರುವನು. ವರದಿಗಾರರು ಹೇಳುತ್ತಾರೆ ಹಝ್ರತ್ ಉಮರ್(ರ) ಆತನ ಹಿದಿನಿಂದ ಈತನು ಸುಳ್ಳು ಹೇಳುತ್ತಿದ್ದಾನೆ ಎಂದು ಹೇಳಿದರು. ನಾನು ಇಸ್ಲಾಮ್ ಸ್ವೀಕರಿಸಿದ್ದೇನೆ ನಾಸ್ತಿಕ(ಸಾಬಿ) ಆಗಲಿಲ್ಲ. ಮತ್ತು ನಾನು ಅಲ್ಲಾಹನ ಹೊರತು ಆರಧನೆಗೆ ಯರು ಅರ್ಹನಲ್ಲ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಹನ ದಾಸ ಹಾಗೂ ರಸೂಲ್ ಆಗಿದ್ದಾರೆ ಎಂದು ಸಾಕ್ಷಿ ನೀಡಿರುವೆನು. ತದನಂತರ ಖುರೈಶರು ಉಮರ್(ರ) ಮೇಲೆ ಧಾವಿಸಿದರು. ಉಮರ್(ರ)ರವರು ಜನರೊಂದಿಗೆ ಹೋರಾಡಿದರು. ವರದಿಗಾರರು ಹೇಳುತ್ತಾರೆ: ಹಝ್ರತ್ ಉಮರ್(ರ)ರವರು ಆಯಾಸಗೊಂಡಾಗ ಕುಳಿತಿಕೊಂಡರು ಆಗ ಜನರು ನಿಮ್ಮ ಮಂದೆ ಬಂದು ನಿಂತುಕೊಂಡರು. ಆಗ ಉಮರ್(ರ) ಹೇಳಿದರು ನೀವೆಲ್ಲರು ಏನುಮಾಡಬೇಕಾದರು ಮಾಡಿರಿ ಆದರೆ ನಾನು ಅಲ್ಲಾಹನಆಣೆ ಹಾಕಿ ಹೇಳುತ್ತೇನೆ ನಾವು ಮುನ್ನೂರು ಪುರುಷರಾದಾಗ ನಾವು ಅದನ್ನು ಅಂದರೆ ಮಕ್ಕವನ್ನು ತ್ಯಜಿಸುವೆವು ಅಥವಾ ನೀವು ನಮಗಾಗಿ ಅದನ್ನು ತ್ಯಜಿಸುವಿರಿ. ಎಂದರೆ ನಾವು ಸ್ವತಂತ್ರವಾಗಿ ಏನು ಬೇಕಾದರು ಮಾಡುವೆವು. ವರದಿಗಾರರು ಹೇಳುತ್ತಾರೆ ಅವರೆಲ್ಲರು ಹಾಗೇ ಇದ್ದರು ಅವರಲ್ಲಿ ಓರ್ವ ವೃದ್ಧ ವ್ಯಕ್ತಿ ಯಮನ್‌ನಿ ಬಟ್ಟೆಯ ಅಂಗಿಧರಿಸಿದ್ದನು ಆತನು ಬಂದು ಕೇಳಿದನು ವಿಷಯ ಏನಾಯಿತು? ಅವರೆಲ್ಲರು ಹೇಳಿದರು ಉಮರ್(ರ) ನಾಸ್ತಿಕನಾಗಿದ್ದಾನೆ. ಆತನು ಹೇಳಿದನು ಇದರಲ್ಲಿ ಅಶ್ಚರ್ಯ ಪಡೆಯುವ ವಿಷಯ ಏನಿದೆ. ಅದಕ್ಕೆ ನೀವು ಏನು ಬಯಸುವಿರಿ? ಬನೂ ಅದಿ ಬಿನ್ ಕಅಬ್‌ನ ತನ್ನ ಜನರನ್ನು ಹೀಗೆ ನಿಮ್ಮ ಬಳಿ ಬಿಡವನು ಎಂದು ನೀವು ಭಾವಿಸುವಿರೋ. ಈ ವ್ಯಕ್ತಿಯನ್ನು ಬಿಟ್ಟುಬಿಡಿ. ವರದಿಗಾರರು ಹೇಳುತ್ತಾರೆ ಅಲ್ಲಾಹನಅಣೆ! ಆ ಎಲ್ಲಾ ಜನರು ತಕ್ಷಣವೇ ಸಲುವಾಗಿ ಬೇರೆಯಾದರು. ಹಝ್ರತ್ ಉಮರ್(ರ)ರವರ ಪುತ್ರ ಇಬ್ನೆ ಉಮರ್(ರ) ಹೇಳುತ್ತಾರೆ ನಾನು ನನ್ನ ತಂದೆಯವರಲ್ಲಿ ಪ್ರಶ್ನಿಸಿದೆ ಆಗ ಅವರು ಮದೀನಕ್ಕೆ ಹಿಜ್ರತ್ ಮಾಡಿದ್ದರು. ಓ ನನ್ನ ತಂದೆ!! ನೀವು ಇಸ್ಲಾಮ್ ಸ್ವೀಕರಿಸಿದಗ ಮದೀನಲ್ಲಿ ಆ ಜನರೊಂದಿಗ ಬಂದ ವ್ಯಕ್ತಿ ಯಾರಾಗಿದ್ದರು. ಅದಕ್ಕೆ ಅವರು ಹೇಳಿದರು: ಓ ನನ್ನ ಪುತ್ರನೇ!! ಅವರು ಆಸ್ ಬಿನ್ ವಾಎಲ್ ಸಹ್ಮಿ ಆಗಿದ್ದರು.
(ಸೀರತ್ ಇಬ್ನೆ ಹಿಶ್ಯಾಮ್ ಪುಟ–161–162, ದಾರ್ ಇಬ್ನೆ ಹಝುಮ್ ಬೈರೂತ್ 2009)

ಬುಖಾರಿನಲ್ಲಿ ಒಂದು ವರದಿ ಹೀಗಿದೆ. ಹಝ್ರತ್ ಇಬ್ನೆ ಉಮರ್(ರ) ವರದಿ ಮಾಡುತ್ತಾರೆ ಒಮ್ಮೆ ಹಝ್ರತ್ ಉಮರ್(ರ) ತಮ್ಮ ಮನೆಯಲ್ಲಿ ಭಯಬೀತರಾಗಿ ಕುಳಿತಿದ್ದರು ಅಷ್ಟರಲ್ಲಿ ಅಬೂ ಉಮ್ರೋ ಬಿನ್ ವಾಎಲ್ ಸಹ್ಮಿ ಬಂದರು. ಅವರು ಒಂದು ಕುಸುರಿಯ ಕೆಲಸ ಮಾಡಿರುವ ಚಾದರ ಹಾಗೂ ರೇಷ್ಮಿಯ ಅಂಗಿ ಧರಿಸಿದ್ದರು ಆತನು ಬನು ಸಹಮ್ ಗೊತ್ರದವರಗಿದ್ದರು ಅವರು ಅಂಧಕಾರದ ದಿನಗಳಲ್ಲಿ ನಮ್ಮ ಪ್ರತಿಜ್ಞ ಬದ್ಧರಾಗಿದ್ದರು. ಆಸ್‌ರವರು ಹಝ್ರತ್ ಉಮರ್(ರ)ರಲ್ಲಿ ವಿಚರಿಸಿದರು ನಿಮ್ಮ ಈ ಸ್ಥಿತಿ ಯಾರು ಮಾಡಿರುವರು? ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ಖೌಮಿನವರು ನಾನು ಮುಸ್ಲಿಮನಾಗಿದಕ್ಕೆ ಅವರು ನನ್ನನ್ನು ಕಂದುಹಾಕುವರು ಎಂದು ಭಾವಿಸುತ್ತಾರೆ. ಅದಕ್ಕೆ ಅವರು ಹೇಲಿದರು ನಿಮ್ಮ ಬಳಿ ಯಾರನ್ನು ತಲುಪಲು ಸಾಧ್ಯವಾಗುವುದಿಲ್ಲ. ಆಸ್‌ರವರು ಈ ವಾತು ಹೇಳಿದಾಗ ನನಗೆ ಮನಃಶಾಂತಿಯಾಯಿತು. ಆಸ್ ಹೋಗಿ ಜನರನ್ನು ಭೇಟಿ ಮಾಡಿದರು. ಈ ಪರಿಸ್ಥಿತಿ ಆಗಿತ್ತು ಮಕ್ಕ ನಗರವು ಆ ಜನರಿಂದ ತುಂಬಿತ್ತು. ಆಸ್ ವಿಚಾರಿಸಿದರು ಎಲ್ಲಿ ಹೋಗುತ್ತಿದ್ದೀರಿ? ಅವರು ಹೇಳಿದರು ನಾವು ಆ ಖತ್ತಾಬ್‌ನ ಪುತ್ರನ ಬಳಿ ಹೋಗುತ್ತಿದ್ದೇವೆ ಆತನು ನಾಸ್ತಿಕನಾಗಿದ್ದಾನೆ. ಅವರು ಹೇಳಿದರು ಆತನ ಬಳಿ ಹೋಗದಿರಿ. ಈ ಮಾತನ್ನು ಆಲಿಸಿ ಅವರೆಲ್ಲರು ಹಿಂಜರಿದರು.
(ಸಹೀಹ್ ಬುಖಾರಿ, ಕಿತಾಬುಲ್ ಮನಾಖಿಬ್, ಹದೀಸ್–3864)

ಹಝ್ರತ್ ಉಮರ್(ರ)ರವರು ಭಯಭೀತರಾಗಿದ್ದರು ಎಂದು ಈ ವರದಿಯಲ್ಲಿ ಉಲ್ಲೇಖವಾಗಿದೆ ಇದು ಸರಿಯಿಲ್ಲ ಏಕೆಂದರೆ ಹಝ್ರತ್ ಉಮರ್(ರ)ರವರ ವಿರುದ್ಧ ಈ ಮಾತಾಗಿದೆ. ಆತಂಕದ ಮತಾಗಿರಬಹುದು ಅದನ್ನು ವರದಿಗಾರರು ಭಯಭೀತಿ ಎಂದು ಹೇಳಿದ್ದಾರೆ. ಕೆಲವು ದಿನಗಳಲ್ಲಿಯೇ ಅವರ ಆ ಆಶ್ರಯವನ್ನು ತ್ಯಜಿಸಿದ್ದರು ಎಂದಯ ಮುಂದೆ ಬರುತ್ತದೆ. ಹಝ್ರತ್ ಝೈದ್ ಬಿನುಲ್ ಅಬಿದೀನ್ ವಲಿವುಲ್ಲ ಶಾಹ್(ರ)ರವರು ಹಝ್ರತ್ ಉಮರ್(ರ)ರವರು ಇಸ್ಲಾಮ್ ಸ್ವೀಕರಿಸಿದ ಘಟನೆಯನ್ನು ವಿವರಿಸುತ್ತ ಆಸ್ ಬಿನೆಆಎಲ್ ಸಹ್ಮಿರವರ ಬಗ್ಗೆ ಬರೆಯುತ್ತಾರೆ:

ಹಝ್ರತ್ ಉಮರ್(ರ)ರವರು ಇಸ್ಲಮ್ ಸ್ವೀಕರಿಸುವುದಕ್ಕು ಮುಂಚೆ ಕೆಲವರು ಈಮಾನ್ ತಂದಿದ್ದರು ಅವರನ್ನು ಬಹಲ ತೊಂದರೆ ಸಂಕಷ್ಟ, ಕಿರುಕುಳಗಳನ್ನು ನೀಡಲಾಗುತ್ತಿತ್ತು ಎಂದು ಪ್ರಸ್ತಾಪಿಸಲಾಗಿದೆ ಒಂದುವೇಳೆ ಆಸ್ ಬಿನ್ ವಾಎಲ್‌ರವರು ಹಝ್ರತ್ ಉಮರ್(ರ)ರವರನ್ನು ಆಶ್ರಯ ನೀಡುತ್ತಿಲ್ಲದಿದ್ದರೆ ಅವರಿಗೂ ಸಹ ಮುಸ್ಲಿಮರಾಗಿದ್ದಕ್ಕೆ ಕಿರುಕುಳಕ್ಕೆ ಗುರಿಪಡಿಸುತ್ತಿದ್ದರು. ಆಸ್ ಬಿನ್ ವಾಎಲ್ ಖುರೈಶ್‌ನ ಗೌರವಾನ್ವಿತ ವ್ಯಕ್ತಿಗಳಲ್ಲಿ

ಒಬ್ಬರಾಗಿದ್ದರು ಮತ್ತು ಬನೂ ಸಹಮ್ ಗೋತ್ರದವರಾಗಿದ್ದರು. ಅವರ ವಂಶಾವಳಿಯು ಹೀಗೆದೆ ಆಸ್ ಬಿನ್ ವಾಎಲ್ ಬಿನ್ ಹಶಿಮ್ ಬಿನ್ ಸೀದ್ ಬಿನ್ ಸಹಮ್. ಹಿಜ್ರತ್‌ಕಿಂತ ಮುಂಚೆಯೇ ಆತನು ಕುಫರ್ ಸ್ಥಿತಿಯಲ್ಲಿಯೇ ನಿಧನರಾದರು ಮತ್ತು ಹಝ್ರತ್ ಉಮರ್(ರ) ಬನೂ ಅದಿ ವಂಶದಿಂದಿದ್ದರು ಮತ್ತು ಬನೂ ಅದಿ ಮತ್ತು ಬನೂ ಸಹಮ್‌ನ ವಂಶವೂ ಪರಸ್ಪರ ಪ್ರತಿಜ್ಞಬದ್ಧರಾಗಿದ್ದರು. ಹೀಗಾಗಿ ಈ ಗೆಳತನ ಹಾಗೂ ಸಹಾಯದ ಕಾರಣ ಆಸ್ ಬಿನ್ ವಾಎಲ್‌ರವರು ತಮ್ಮ ನೈತಿಕತೆಯ ಕಾರಣದಿಂದ ಹಝ್ರತ್ ಉಮರ್(ರ)ರವರನ್ನು ಸಹಾಯ ಮಾಡಿದರು. (ಸಹೀಹ್ ಬುಖಾರಿ, (ಅನುವಾದ) ಕಿತಾಬ್ ಮನಾಖಿಬು ಅನ್ಸಾರ್, ಸಂಪುಟ–7, ಪುಟ–346–347)

ನಾನು ಮೊದಲು ಹೇಳಿದ ಹಾಗೆ ಹಝ್ರತ್ ಉಮರ್(ರ)ರವರು ಆಸ್ ಬಿನ್ ವಾಎಲ್‌ರವರ ಆಶ್ರಯವನ್ನು ರದ್ದುಗೊಳಿಸಿದ್ದರು. ಅದರ ಬಗ್ಗೆ ಹಝ್ರತ್ ಉಮರ್(ರ)ರವರು ಸ್ವತಃ ಹೇಳುತ್ತಾರೆ ನಾನು ಎಂದೂ ಮುಸ್ಲಿಮರನ್ನು ಪೆಟ್ಟುಬೀಳುತ್ತಿರುವುದನ್ನು ನೋಡಲು ಮತ್ತು ಅದೇ ಸಂದರ್ಭದಲ್ಲಿ ನನಗೆ ಪೆಟ್ಟು ಬೀಳದಿರಲಿ ಎಂದು ಇಷ್ಟಪಡುತ್ತಿರಲಿಲ್ಲ. ಅವರು ಹೇಳುತ್ತಾರೆ ನಾನು ಯೋಚಿಸಿದೆ ಇದು ಸಾಮಾನ್ಯ ಮಾತು ಅಲ್ಲ ನನಗೂ ಸಹ ಅನ್ಯ ಮುಸ್ಲಿಮರಂತೆ ಅಂತಹ ತೊಂದರೆಗಳನ್ನು ನಾನು ಅನುಭವಿಸಬೇಕು ಎಂದು. ಅವರು ಮತ್ತೆ ಹೇಳುತ್ತಾರೆ ನಾನು ಅವರೆಲ್ಲರು ಖಾನ ಕಅಬದಲ್ಲಿ ಬಂದು ಸೇರುವ ತನಕ ಹಾಗೆಯೇ ಇದ್ದೆ ತದನಂತರ ನಾನು ನನ್ನ ಸೋದರ ಮಾವ ಆಸ್ ಬಿನ್ ವಾಎಲ್‌ರವರ ಬಳಿ ಹೋಗಿ ಹೇಳಿದೆ ನನ್ನ ಮಾತು ಕೇಳಿರಿ ಅದಕ್ಕೆ ಅವರು ಹೇಳಿದರು ನಾನು ಏನು ಕೇಳಲಿ? ಅದಕ್ಕೆ ಹಝ್ರತ್ ಉಮರ್ ಹೇಳಿದರು ನಾನು ನಿಮ್ಮ ಆಶ್ರಯವನ್ನು ನಿಮಗೆ ಅರ್ಪಿಸುತ್ತಿದ್ದೇನೆ. ಅದಕ್ಕೆ ನನ್ನ ಸೋದರಮಾವ ಹೇಳಿದರು ಓ ನನ್ನ ಸೋದರಳಿಯನೇ ನೀನು ಹೀಗೆ ಮಾಡಬೇಡ. ಅದಕ್ಕೆ ನಾನು ಉತ್ತರಿಸಿದೆ: ಹೀಗೆ ಇರುವುದು ಅದಕ್ಕೆ ಅವರು ಹೇಳಿದರೆ ನಿನ್ನ ಇಷ್ಟದ ಪ್ರಕಾರವೇ ಆಗಲಿ ಎಂದರು. ಹಝ್ರತ್ ಉಮರ್ ಹೇಳುತ್ತಾರೆ ನಾನು ಅವರ ಆಶ್ರಯವನ್ನು ಅವರಿಗೆ ಅರ್ಪಿಸಿದ ನಂತರ ನಾನು ಅಲ್ಲಾಹನು ಇಸ್ಲಾಮ್ ಧರ್ಮವನ್ನು ಗೌರವ ನೀಡುವ ತನಕ ತೊಂದರೆಗಳನ್ನು ಅನುಭವಿಸುತ್ತಿದ್ದೆ. (ಅದಸುಲ್‌ಗಾಬ ಸಂಪುಟ–4, ಪುಟ–141, ದಾರುಲ್‌ಕುತುಬ್ ಇಲ್‌ಮಿಯ 2003)

ಮುಹಮ್ಮದ್ ಬಿನ್ ಉಬೈದ್ ಹೇಳುತ್ತಾರೆ: ನನಗೆ ನೆನಪಿದೆ ನಮಗೆ ಹಝ್ರತ್ ಉಮರ್(ರ)ರವರು ಇಸ್ಲಾಮ್ ಸ್ವೀಕರಿಸುವ ತನಕ ಬೈತುಲ್ಲಾಹ್‌ನಲ್ಲಿ ನಮಾಝ್ ನಿರ್ವಹಿಸಲು ಅನುಮತಿ ಇರಲಿಲ್ಲ. ಹಝ್ರತ್ ಉಮರ್(ರ)ರವರು ಇಸ್ಲಾಮ್ ಸ್ವೀಕರಿಸಿದ ನಂತರ ಅವರು ಎಲ್ಲಾ ವಿರೋಧಿಗಳೊಡನೆ ಹೋರಾಡಿದರು ಎಲ್ಲಿಯ ತನಕ ಎಂದರೆ ಅವರೆಲ್ಲರು ನಮನ್ನು ನಮಾಝ್ ನಿರ್ವಹಿಸಲು ಅನುಮತಿ ನೀಡಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–143, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕರಿಸಿದ ನಂತರ ನವು ಗೌರವದಿಂದ ಇದ್ದೆವು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–3684)

ನಂತರದ ತೊಂದರೆಗಳು ಮುಂಚೆಯ ತೊಂದರೆಗಳಿಂದ ನಂತರದ ತೊಂದರೆಗಳನ್ನು ಇವರೆಲ್ಲರು ತೊಂದರೆಗಳು ಎಂದು ಹೇಳುತ್ತಿರಲಿಲ್ಲ ಅದಾಗ್ಯೂ ಇತಿಹಾಸವು ಹಝ್ರತ್ ಉಮರ್(ರ)ರವರು ಸಹ ತೊಂದರೆಗಳನ್ನು ಅನುಭವಿಸಿದ್ದರು ಎಂದು ಹೇಳುತ್ತದೆ.

ಹಝ್ರತ್ ಅಬ್ದುಲ್ಲ ಬಿನ್ ಹಿಶ್ಯಾಮ್ ಹೇಳುತ್ತಾರೆ: ನಾವು ಪ್ರವಾದಿ ಮುಹಮ್ಮದ್(ಸ) ಅವರೊಂದಿಗೆ ಇದ್ದೆವು. ಆಗ ಹಝ್ರತ್ ಪೈಗಂಬರ್‌ರೊಡನೆ(ಸ) ಹಝ್ರತ್ ಉಮರ್(ರ) ಹೇಳಿದರು: ನೀವು ನನಗೆ ಎಲ್ಲ ವಸ್ತುಗಳಿಗಿಂತ ಪ್ರಿಯರಾಗಿದ್ದೀರಿ. ನನ್ನ ಸ್ವಂತ ಆತ್ಮದ ಹೊರತು. ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ನಾನು ನಿನ್ನ ಸ್ವಂತ ಆತ್ಮಕ್ಕಿಂತ ಪ್ರಿಯನಾಗುವ ತನಕ ನಿನ್ನ ವಿಶ್ವಾಸ ಪರಿಪೂರ್ಣವಾಗಲಿಕ್ಕಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ಈಗ ನೀವು ನನಗೆ ನನ್ನ ಆತ್ಮಕ್ಕಿಂತ ಪ್ರಿಯರಾಗಿರುವಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ ಈಗ ಸರಿಯಾಯಿತು. (ಸಹೀಹ್ ಬುಖಾರಿ ಕಿತಾಬುಲ್ ಈಮಾನ್, ಹದೀಸ್–6632)

ಅಂದರೆ ಈಗ ಸರಿಯಾಯಿತು. ಇದು ಈಮಾನಿನ ಸ್ಥಿತಿಯಾಗಿದೆ.

ಹಝ್ರತ್ ಅಬ್ದಿಲ್ಲಾ ಬಿನ್ ಮಸ್‌ಊದ್(ರ)ರವರು ಹಝ್ರತ್ ಉಮರ್(ರ) ಮದೀನಕ್ಕೆ ಹಿಜ್ರತ್ ಮಾಡಿದ ಕುರಿತು ಹಝ್ರತ್ ಅಲಿ ಬಿನ್ ಅಬೂತಾಲಿಬ್ ರಝಿಯಲ್ಲಾಹು ಅನ್‌ಹುರವರು ಹೇಳುತ್ತಾರೆ ಮುಹಾಜಿರೀನರಲ್ಲಿ ಹಝ್ರತ್ ಉಮರ್(ರ)ರವರನ್ನು ಹೊರತುಪಡಿಸಿ ಬೇರೆಯವರೆಲ್ಲರು ರಹಸ್ಯವಾಗಿ ಹಿಜ್ರತ್ ಮಾಡಿದರು. ಹಝ್ರತ್ ಉಮರ್(ರ) ಹಿಜ್ರತ್ ಮಾಡಲು ಉದ್ದೇಶಿಸಿದಾಗ ಖಡ್ಗ ಮತ್ತು ಬಿಲ್ಲು ಬಾಣವನ್ನು ಹಿಡಿದುಕೊಂಡು ಕಅ್‌ಬ ಭವನಕ್ಕೆ ಹೋಗಿದರು ಖುರೈಶರ ಸರದಾರರು ಅಲ್ಲಿ ಕುಳಿತಿದ್ದರು. ಅವರು ಕಅಬ ಭವನವನ್ನು ಏಳು ಸುತ್ತುಗಳನ್ನು ಸುತ್ತುವರಿದರು. ತದನಂತರ ಅವರು ಮಖಾಮೆ ಇಬ್ರಾಹೀಮರ ಬಳಿ ಬಂದು ಮನಃಶಾಂತಿಯಿಂದ ನಮಾಝ್ ನಿರ್ವಹಿಸಿದರು. ತದನಂತರ ಅವರು ಪ್ರತಿಯೊಂದು ಗುಂಪಿನ ಬಳಿ ನಿಂತು ಹೀಗೆ ಘೋಷಿಸಿದರು: ಯಾರು ಅವರ ತಾಯಿಯನ್ನು ನಷ್ಟಪಡಿಸಲು, ಮಕ್ಕಳನ್ನು ಅನಾಥರನ್ನಾಗಿ ಮಾಡಲು ಮತ್ತು ಪತ್ನಿಯನ್ನು ವಿಧವೆಯನ್ನಾಗಿ ಮಾಡಲು ಬಯಸುತ್ತಾರೋ ಅವರು ನನ್ನನ್ನು ಈ ಕಣಿವೆಯ ಆಚೆ ಕಡೆ ಭೇಟಿಯಾಗಲಿ. ಹಝ್ರತ್ ಅಲಿ ಹೇಳುತ್ತಾರೆ ಹಝ್ರತ್ ಉಮರ್(ರ)ರವರನ್ನು ಕೇವಲ ಕೆಲವು ನಿರ್ಗತಿಕ ಮುಸ್ಲಿಮರು ಮಾತ್ರ ಹಿಂಬಾಲಿಸಿದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–3, ಪುಟ–648–649, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಉಮರ್(ರ) ಅವರು ವಲಸೆ ಹೋಗುವುದಾಗಿ ಬಹಿರಂಗವಾಗಿ ಘೋಷಿಸುವುದನ್ನು ಈ ವರದಿಯಲ್ಲಿ ಹಝ್ರತ್ ಅಲಿ(ರ) ಮಾತ್ರ ಉಲ್ಲೇಖಿಸಿದ್ದಾರೆ, ಆದರೆ ಬಹುಪಾಲು ಜೀವನಚರಿತ್ರೆಕಾರರು ಇದಕ್ಕೆ ವಿಭಿನ್ನ ಅಭಿಪ್ರಾಯವನ್ನು ಹೊಂದಿದ್ದಾರೆ. ಮುಹಮ್ಮದ್ ಹುಸೈನ್ ಹಯ್ಕಲ್ ಅವರು ಹಝ್ರತ್ ಉಮರ್(ರ) ಅವರ ಜೀವನ ಮತ್ತು ಪಾತ್ರದ ಬಗ್ಗೆ ಪುಸ್ತಕ ಬರೆದಿದ್ದಾರೆ. ಆತನು ತನ್ನ ಪುಸ್ತಕದಲ್ಲಿ, ವಲಸೆಗೆ ಸಂಬಂಧಿಸಿದಂತೆ, ಪ್ರವಾದಿ ಮುಹಮ್ಮದ್(ಸ) ಅವರು ಮೆಕ್ಕಾದಿಂದ ಸದ್ದಿಲ್ಲದೆ ಮತ್ತು ವಿವೇಚನೆಯಿಂದ ವಲಸೆ ಹೋಗುವಂತೆ ಸೂಚನೆ ನೀಡಿದ್ದಾರೆ, ವಿರೋಧಿಗಳು ಇದರ ಬಗ್ಗೆ ಅರಿವು ಮೂಡದಂತೆ ಮತ್ತು ಅವರನ್ನು ತಡೆಯಲು ಅಥವಾ ಅಡ್ಡಿಯಾಗಲು ಪ್ರಯತ್ನಿಸದಂತೆ. ಆದ್ದರಿಂದ, ಈ ಸ್ಪಷ್ಟ ಸೂಚನೆಯ ಬೆಳಕಿನಲ್ಲಿ, ಹಝ್ರತ್ ಉಮರ್(ರ) ಈ ಸೂಚನೆಯನ್ನು ಹೇಗೆ ಅನುಸರಿಸದದಿರಲು ಸಾಧ್ಯ? ಅದರಲ್ಲೂ ವಿಶೇಳವಾಗಿ ಅಲ್–ತಬಕತ್‌ನಲ್ಲಿ ಇಬ್ನ್ ಸಾದ್ ಮತ್ತು ಇಬ್ನ್ ಹಿಶಮ್‌ನಲ್ಲಿ ಅವರು, ಹಝ್ರತ್ ಉಮರ್(ರ)ರವರು ಅನ್ಯ ಮುಸ್ಲಿಮರೊಂದಗೆ ರಹಸ್ಯವಾಗಿ ವಲಸೆ ಬಂದರು ಎಂದು ಬರೆಯಲಾಗಿದೆ. ಅದೇನೇ ಇದ್ದರೂ, ಹಝ್ರತ್ ಅಲಿ(ರ)ರವರ ವರದಿ ಸರಿಯಾಗಿದೆ ಎಂದು ಒಬ್ಬರು ಭಾವಿಸಿದರೆ, ಹಝ್ರತ್ ಉಮರ್(ರ) ಈ ಘೋಳಣೆ ಮಾಡಿದರೂ, ಆ ಸಮಯದಲ್ಲಿ ವಲಸೆ ಹೋಗಲಿಲ್ಲ; ಅಂದರೆ, ಅವರು ವಲಸೆ ಹೋಗುವುದಾಗಿ ಕಅಬದ ಸುತ್ತಮುತ್ತಲಿನ ಖುರೈಶ್ ನಾಯಕರ ಮುಂದೆ ಘೋಷಿಸಿದರು ಮತ್ತು ಆದ್ದರಿಂದ ಅವರನ್ನು ತಡೆಯಲು ಇಚ್ಛಿಸುವವರು ತಡೆಯಲು ಪ್ರಯತ್ನಿಸಬಹುದು, ಆದರೆ ಆ ಸಮಯದಲ್ಲಿ ಅವರು ವಲಸೆ ಹೋಗಲಿಲ್ಲ. ನಂತರ, ವಲಸೆ ಹೋಗಲು ಸಮಯ ಬಂದಾಗ, ಅವರು ಸದ್ದಿಲ್ಲದೆ ವಲಸೆ ಬಂದರು. ಅದೇನೇ ಇದ್ದರೂ, ಹಯ್ಕಲ್ ಪ್ರಸ್ತಾಪಿಸಿರುವ ಅಂಶವೂ ಗಮನಾರ್ಹವಾಗಿದೆ ಮತ್ತು ಮೊದಲೇ ಹೇಳಿದಂತೆ, ಅಲ್–ತಬಕಾತ್‌ನಲ್ಲಿ ಇಬ್ನ್ ಸಅದ್ ಮತ್ತು ಇಬ್ನ್ ಹಿಶಮ್ ಕೂಡ ಇದನ್ನು ಹೇಳಿದ್ದಾರೆ. ಪ್ರವಾದಿ ಮುಹಮ್ಮದ್(ಸ)ರ ಆಜ್ಞೆಗೆ ಅನುಗುಣವಾಗಿ, ಹಝ್ರತ್ ಉಮರ್ (ರ) ಸಹ ಇತರ ಮುಸ್ಲಿಮರೊಂದಿಗೆ ಸದ್ದಿಲ್ಲದೆ ವಲಸೆ ಹೋದರು ಎಂದು ತೋರುತ್ತದೆ, ಏಕೆಂದರೆ ಆ ಸಮಯದಲ್ಲಿ ಮೆಕ್ಕಾದ ಪರಿಸ್ಥಿತಿಯನ್ನು ಗಮನಿಸಿದರೆ, ಅವರ ಉದ್ದೇಶಗಳನ್ನು ಘೋಷಿಸುವ ಮೂಲಕ ವಲಸೆ ಹೋಗಲು ಸಾಧ್ಯವಾಗಲಿಲ್ಲ. ವಾಸ್ತವವಾಗಿ, ಮೆಕ್ಕಾವನ್ನು ವಶಪಡಿಸಿಕೊಳ್ಳುವವರೆಗೂ, ವಲಸೆ ಬಂದ ಯಾರಾದರೂ ಅದನ್ನು ರಹಸ್ಯವಾಗಿ ಮಾಡಬೇಕಾಗಿತ್ತು. ಅದೇನೇ ಇದ್ದರೂ, ಹಝ್ರತ್ ಅಲಿ(ರ)ರವರ ವರದಿಯನ್ನು ಸರಿಯೆಂದು ಪರಿಗಣಿಸಬೇಕಾದರೆ, ಅದು ಅವರ ಸ್ವಂತ ಭಾಗದಿಂದಲೇ ಆಗಿರಬಹುದು, ಆದರೆ ಸ್ಪಷ್ಟವಾದ ಸಾಕ್ಷ್ಯವು ಈ (ವರದಿಯು) ಸರಿಯಾಗಿಲ್ಲ ಎಂದು ಸೂಚಿಸುತ್ತದೆ. (ಮುಹಮ್ಮದ್ ಹುಸೈನ್ ಹೈಕಲ್, ಅಲ್–ಫರುಕ್ ಉಮರ್, ಸಂಪುಟ 1, ಬಾಬ್ ಫಿ ಸುಹಬತ್ ಅಲ್–ನಬಿ (ಸಾ), [ಬೈರುತ್, ಲೆಬನಾನ್: ದಾರ್ ಅಲ್–ಕುತುಬ್ ಅಲ್–ಇಲ್ಮಿಯಾಹ್, 2007], ಪುಟಗಳು 53–54)

ಹಝ್ರತ್ ಬಾರಾ ಬಿನ್ ಆಝಿಬ್(ರ) ವರದಿ ಮಾಡುತ್ತಾರೆ: "ನಮ್ಮನ್ನು ತಲುಪಿದ ಮುಹಾಜಿರೀನ್‌ಗಳಲ್ಲಿ ಮೊದಲಿಗರು ಬನು ಅಬ್ದುಲ್–ದಾರ್ ಬುಡಕಟ್ಟು ಜನಾಂಗಕ್ಕೆ ಸೇರಿದ ಹಝ್ರತ್ ಮಸ್‌ಅಬ್ಬಿನ್ ಉಮೈರ್(ರ), ನಂತರ ಹಝ್ರತ್ ಇಬ್ನ್ ಉಮ್ ಮಕ್ತುಮ್(ರ) ಅವರು ಕುರುಡರಾಗಿದ್ದರು ಮತ್ತು ಬನು ಫಿಹ್ರ್ ಬುಡಕಟ್ಟು ಜನಾಂಗದವರು. ಅವರ ನಂತರ, ಇದು ಹಝ್ರತ್ ಉಮರ್ (ರ) ಬಿನ್ ಖತ್ತಾಬ್ ಮತ್ತು ಕುದುರೆಯ ಮೇಲೆ 20 ಜನರಿದ್ದರು. ನಾವು ಅವರಿಂದ ಪ್ರವಾದಿ(ಸ)ರವರ ಬಗ್ಗೆ ವಿಚಾರಿಸಿದೆವು, ಅವರು ಅವರ ಹಿಂದೆ ಇದ್ದಾರೆ ಎಂದು ಅವರು ಹೇಳಿದರು", ಅಂದರೆ ಸ್ವಲ್ಪ ಸಮಯದ ನಂತರ ಅವರು ಬರುತ್ತಾರೆ. "ನಂತರ ಸ್ವಲ್ಪ ಸಮಯದ ನಂತರ, ಪ್ರವಾದಿ(ಸ) ಬಂದರು ಮತ್ತು ಹಝ್ರತ್ ಅಬೂಬಕರ್(ರ) ಅವರೊಂದಿಗೆ

ಇದ್ದರು." (ಉಸ್ದ್ ಅಲ್-ಘಾಬಾ ಫಿ ಮಾರಿಫತ್ ಅಲ್-ಸಹಬಾ, ಸಂಪುಟ 4 [ಬೈರುತ್, ಲೆಬನಾನ್: ದಾರ್ ಅಲ್-ಕುತುಬ್ ಅಲ್-ಇಲ್ಮಿಯಾಹ್, 2003], ಪುಟ 145)

ಈ ವರದಿ ಸರಿಯಾಗಿದ್ದರೆ, ಒಂದು ಸಭೆಯ ಮೊದಲು ಹಝ್ರತ್ ಉಮರ್(ರ) ಅವರು ತಮ್ಮ ವಲಸೆಯನ್ನು ಪ್ರಸ್ತಾಪಿಸಿರಬಹುದು ಮತ್ತು ಯಾರಾದರೂ ಬಯಸಿದರೆ ಅವರು ಅವರನ್ನು ತಡೆಯಲು ಪ್ರಯತ್ನಿಸಬಹುದು ಎಂದು ತೀವ್ರವಾಗಿ ಘೋಷಿಸಬಹುದಿತ್ತು, ಆದರೆ ನಂತರ ಅವರು ಸದ್ದಿಲ್ಲದೆ ವಲಸೆ ಬಂದರು ಏಕೆಂದರೆ ಈ ವರದಿಯಲ್ಲಿ, ಅವರೊಂದಿಗೆ 20 ಜನರು ವಲಸೆ ಬಂದರು ಎಂದು ಹೇಳಲಾಗಿದೆ. ಅದೇನೇ ಇದ್ದರೂ, ಅಲ್ಲಾಹನು ಚೆನ್ನಾಗಿ ಬಲ್ಲವನು. ಮದೀನಾಕ್ಕೆ ಬಂದ ನಂತರ, ಹಝ್ರತ್ ಉಮರ್(ರ) ರಿಫಾ 'ಬಿನ್ ಅಬ್ದಿಲ್ ಮುಂಜೀರ್ ಅವರೊಂದಿಗೆ ಖುಬಾದಲ್ಲಿದ್ದರು. (ಶೇಖ್ ಶಾ ಮೊಯಿನುದ್ದೀನ್ ಅಹ್ಮದ್ ನದ್ವಿ, ಸೈರ್ ಅಲ್-ಸಹಾಬಾ, ಸಂಪುಟ 1 [ಕರಾಚಿ, ಪಾಕಿಸ್ತಾನ: ದಾರ್ ಅಲ್-ಇಶಾಹಾ, 2004], ಪುಟ 93)

ಖುಬಾ ಮದೀನಾದಿಂದ ಮೂರು ಮೈಲಿ ದೂರದಲ್ಲಿರುವ ಒಂದು ಎತ್ತರದ ಪ್ರದೇಶವಾಗಿದೆ ಮತ್ತು ಆ ಸಮಯದಲ್ಲಿ, ಅನ್ಸಾರ್‌ನ ಕೆಲವು ಕುಟುಂಬಗಳು ಅಲ್ಲಿ ನೆಲೆಸಿದ್ದವು. ಆ ಕುಟುಂಬಗಳಲ್ಲಿ ಅತ್ಯಂತ ಶ್ರೇಷ್ಠರು ಅಮರ್ ಬಿನ್ ಔಫ್. ಈ ಕುಟುಂಬದ ನಾಯಕ ಕುಲ್ತುಮ್ ಬಿನ್ ಹಿದ್ಮ್, ಅವರೊಂದಿಗೆ ಪ್ರವಾದಿ ಮುಹಮ್ಮದ್(ಸ) ಅವರು ಖುಬಾಗೆ ಬಂದಾಗ ಅಲ್ಲಿಯೇ ಇದ್ದರು. (ಸಯ್ಯಿದ್ ಫಾಧ್ಲ್ ಅಲ್-ರಹಮಾನ್, ಫರ್ಹಾಂಗ್-ಇ-ಸಿರಾತ್ [ಕರಾಚಿ, ಪಾಕಿಸ್ತಾನ: ಜಾವ್ವಾರ್ ಅಕಾಡೆಮಿ ಪಬ್ಲಿಕೇಶನ್ಸ್, 2003], ಪು. 230)

ಹಝ್ರತ್ ಉಮರ್ (ರ) ಸಹೋದರ ಸಂಬಂಧಕ್ಕೆ ಸಂಬಂಧಿಸಿದಂತೆ ವಿವಿಧ ವರದಿಗಳಿವೆ; ಒಂದು ವರದಿಯ ಪ್ರಕಾರ, ಪ್ರವಾದಿ(ಸ) ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕರ್ ಸಿದ್ದಿಖ್(ರ) ನಡುವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಸಹೋದರತ್ವದ ಬಂಧಗಳು ಎರಡು ಬಾರಿ ರೂಪುಗೊಂಡವು – ಒಮ್ಮೆ ಮೆಕ್ಕಾದಲ್ಲಿ ಮತ್ತು ಒಮ್ಮೆ ಮದೀನಾದಲ್ಲಿ ವಲಸೆಯ ನಂತರ. ಮಕ್ಕಾದಲ್ಲಿ, ಪವಿತ್ರ ಪ್ರವಾದಿ(ಸ)ರವರು ತನ್ನ ಮತ್ತು ಹಝ್ರತ್ ಅಲಿ(ರ) ನಡುವೆ ಮತ್ತು ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕರ್(ರ) ನಡುವೆ ಸಹೋದರತ್ವದ ಸಂಬಂಧವನ್ನು ಸ್ಥಾಪಿಸಿದರು. ಅದೇನೇ ಇದ್ದರೂ, ಸಹೋದರತ್ವದ ಈ ಬಂಧಗಳು ಎರಡು ಪ್ರತ್ಯೇಕ ಘಟನೆಗಳಾಗಿವೆ. ಮದೀನಾದಲ್ಲಿ, ಪ್ರವಾದಿ(ಸ)ರವರು ಮುಹಾಜಿರೀನ್ ಮತ್ತು ಅನ್ಸಾರ್ ನಡುವೆ ಸಹೋದರತ್ವದ ಬಂಧಗಳನ್ನು ಸ್ಥಾಪಿಸಿದರು. ಒಂದು ವರದಿಯ ಪ್ರಕಾರ, ಮದೀನಕ್ಕೆ ವಲಸೆ ಬಂದ ನಂತರ, ಪ್ರವಾದಿ(ಸ) ಹಝ್ರತ್ ಉಮರ್(ರ) ಮತ್ತು ಹಝ್ರತ್ ಉವಾಯಿಮ್ ಬಿನ್ ಸಯೀದಾ ನಡುವೆ ಸಹೋದರತ್ವದ ಸಂಬಂಧವನ್ನು ಸ್ಥಾಪಿಸಿದರು. ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಉಮರ್ ಬಿನ್ ಅಲ್-ಖತ್ತಾಬ್(ರ) ಮತ್ತು ಹಝ್ರತ್ ಇತ್ಬಾನ್ ಬಿನ್ ಮಲಿಕ್(ರ) ನಡುವೆ ಸಹೋದರತ್ವದ ಬಂಧವನ್ನು ಸ್ಥಾಪಿಸಲಾಯಿತು. ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಉಮರ್(ರ) ಮತ್ತು ಹಝ್ರತ್ ಮುಆಜ್ ಬಿನ್ ಅಫ್ರಾ(ರ) ನಡುವೆ ಸಹೋದರತ್ವದ ಬಂಧವನ್ನು ಸ್ಥಾಪಿಸಲಾಯಿತು. (ಸಬ್‌ಲುಲ್ ಹುದಾ ವರ್‍ರಶ್ಶಾದ್ ಫೀ ಸೀರತ್ ಖೈರುಲ್ ಇಬಾದ್, ಸಂಪುಟ-3, ಪುಟ-363, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-206, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರ್ (ರ) ಮತ್ತು ಹಝ್ರತ್ ಇತ್ಬಾನ್ ಬಿನ್ ಮಲಿಕ್ ನಡುವೆ ಸಹೋದರತ್ವದ ಬಂಧವನ್ನು ಸ್ಥಾಪಿಸಲಾಗಿದೆ ಎಂದು ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆದಿದ್ದಾರೆ. (ಸಿರಾತ್ ಖತಮುನ್-ನಬಿಯಿನ್, ಹಝ್ರತ್ ಮಿರ್ಜಾ ಬಶೀರ್ ಅಹ್ಮದ್(ರ), ಪು. 277)

ಅಜಾನ್ [ಪ್ರಾರ್ಥನೆಗೆ ಕರೆ] ಪ್ರಾರಂಭವಾಗುವುದಕ್ಕೆ ಸಂಬಂಧಿಸಿದಂತೆ, ಮುಹಮ್ಮದ್ ಬಿನ್ ಅಬ್ದುಲ್ಲಾ ಬಿನ್ ಝೈದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ "ನಾವು ಬೆಳಿಗ್ಗೆ ಪ್ರವಾದಿ(ಸ)ರವರ ಬಳಿಗೆ ಹೋಗಿ ಒಂದು ಕನಸನ್ನು ನಿರೂಪಿಸಿದ್ದೇವು. ಹಝ್ರತ್ ಅಬ್ದುಲ್ಲಾ ಗೆ ಸಂಬಂಧಿಸಿದಂತೆ ಇದನ್ನು ಉಲ್ಲೇಖಿಸಲಾಗಿದೆ. ಆದರೆ ಹಝ್ರತ್ ಉಮರ್(ರ)ರವರ ಬಗ್ಗೆ ಇಲ್ಲಿಯೂ ಉಲ್ಲೇಖವಿದೆ, ನಾನು ಅದನ್ನು ಮತ್ತೆ ಸಂಕ್ಷಿಪ್ತವಾಗಿ ನಿರೂಪಿಸುತ್ತೇನೆ, ಅಥವಾ ಇತರ ನಿರೂಪಣೆಗಳ ಬೆಳಕಿನಲ್ಲಿ ಉಲ್ಲೇಖಿಸುತ್ತೇನೆ. "ಪ್ರವಾದಿ ಮುಹಮ್ಮದ್(ಸ)ರವರು ಹೇಳಿದರು ನಿಸ್ಸಂದೇಹವಾಗಿಯು ಇದು ನಿಜವಾದ ಕನಸಾಗಿದೆ. ನೀವು ಬಿಲಾಲ್ ಅವರ ಬಳಿ ಹೋಗಿ ಏಕೆಂದರೆ ಅವರು ಹೆಚ್ಚು ಶಕ್ತಿಯುತ ಧ್ವನಿಯನ್ನು ಹೊಂದಿದ್ದಾರೆ ಅವರೊಂದಿಗೆ ಹೋಗಿ ಮತ್ತು ನಿಮಗೆ ಕಲಿಸಿದದನ್ನು ಅವರಿಗೂ ಕಲಿಸಿರಿ. ಅವರು (ಹಝ್ರತ್ ಅಬ್ದುಲ್ಲಾ ಬಿನ್ ಜೈದ್) ವಿವರಿಸುತ್ತಾರೆ: "ಹಝ್ರತ್ ಉಮರ್ ಬಿನ್ ಅಲ್-ಖತ್ತಾಬ್ ಅವರು ನಮಾಝ್‌ಗಾಗಿ ಹಝ್ರತ್ ಬಿಲಾಲ್ ಅವರ ಧ್ವನಿಯನ್ನು ಕೇಳಿದಾಗ, ಅವರು ಪ್ರವಾದಿ(ಸ)ರವರ ಬಳಿಗೆ ಹೋದರು, ಆ ರೀತಿಯಲ್ಲಿ ಅವರ ಮೇಲಂಗಿಯನ್ನು ಅವರ ಹಿಂದೆ ಎಳೆಯುತ್ತ ಬಂದು ಹೇಳಿದರುಯಾ ರಸೂಲಲ್ಲಾಹ್(ಸ) ಅಲ್ಲಾಹನಆಣೆ!! ನಿಸ್ಸಂದೇಹವಾಗಿಯೂ ನಾನು ಸಹ ಅವರು ಈಗಳ್ಳೇ ಪಠಿಸಿರುವಂತೆಯೇ ನಾನು [ಕನಸಿನಲ್ಲಿ] ನೋಡಿದೆ. ಅದಕ್ಕೆ ವರದಿಗಾರರು ಹೇಳುತ್ತಾರೆ ಪ್ರವಾದಿ(ಸ) ಹೇಳಿದರು "ಎಲ್ಲಾ ಸ್ತುತಿ ಅಲ್ಲಾಹನಿಗೆ ಸೇರಿದೆ! ಈ ವಿಳಯ ಈಗ ದೃಢಪಟ್ಟಿದೆ. (ಸುನನ್ ಅಲ್-ತಿರ್ಮಿಧಿ, ಕಿತಾಬ್ ಅಲ್-ಸಲಾಹ್, ಬಾಬ್ ಮಾ ಜಯಾ ಫೈ ಬ್ಯಾಡ್ ಅಲ್-ಅಜನ್, ಹದೀಸ್-189)

ಈ ಘಟನೆಯನ್ನು ಪ್ರಸ್ತಾಪಿಸುವಾಗ, ಹಝ್ರತ್ ಮುಸ್ಲಿಹ್ ಮಾದ್(ರ) ಹೀಗೆ ಹೇಳುತ್ತಾರೆ: "ಪ್ರವಾದಿ(ಸ)ರವರ ಕಾಲದಲ್ಲಿ, ಹಝ್ರತ್ ಅಬ್ದುಲ್ಲಾ ಬಿನ್ ಜೈದ್ ಎಂಬ ಹೆಸರಿನ ಸಹಾಬಿ ಇದ್ದರು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಅಧಾನಿನ ಶಬ್ಧಗಳನ್ನು ಕನಸ್ಸಿನ ಮೂಲಕ ಕಲಿಸಿದನು ಮತ್ತು ಈ ಕನಸ್ಸನ್ನೆ ನಿಜವೆಂದು ಒಪ್ಪಿಕೊಂಡನು, ಪ್ರವಾದಿ(ಸ) ಅವರು ಮುಸ್ಲಿಮರಿಗಾಗಿ ಅಜಾನ್ ಎಂದು ಕರೆಯುವ ಅಭ್ಯಾಸವನ್ನು ಸ್ಥಾಪಿಸಿದರು. ನಂತರ, ಖುರ್‌ಆನ್‌ನ ಬಹಿರಂಗವು ಈ ಸಂಗತಿಯನ್ನು ದೃಢ ಪಡಿಸಿತು. "ಹಝ್ರತ್ ಉಮರ್ ಹೇಳುವಂತೆ, 'ಸರ್ವಶಕ್ತನಾದ ಅಲ್ಲಾಹನು ಸಹ ನನಗೆ ಅಧಾನ್ ಅನ್ನು ಕಲಿಸಿದನು, ಆದರೆ ನಾನು 20 ದಿನಗಳ ಕಾಲ ಈ ವಿಳಯದಲ್ಲಿ ಮೌನವಾಗಿಯೇ ಇದ್ದೆ, ಬಹುಶಃ ಯಾರಾದರೂ ಈಗಾಗಲೇ ಪವಿತ್ರ ಪ್ರವಾದಿ(ಸ)ರ ಬಗ್ಗೆ ಪ್ರಸ್ತಾಪಿಸಿದ್ದಾರೆ ಎಂದು ಭಾವಿಸಿ,' ಈಗಾಗಲೇ ಈ ಬಗ್ಗೆ ಏನಾದರೂ ಹೇಳಿದ್ದರು ಮತ್ತು ಮತ್ತೆ ಪ್ರಸ್ತಾಪಿಸುವ ಅಗತ್ಯವಿಲ್ಲ ಎಂದು ಭಾವಿಸಿದ್ದರು. ಪ್ರವಾದಿ(ಸ)ರ ಮುಂದಿನ ಹದೀಸ್ ಈ ವಿಳಯವನ್ನು ಉಲ್ಲೇಖಿಸುತ್ತದೆ: **ಅಲ್‌ಮುಮಿನು ಯರಾ ಅಔ ಯುರಾಲಹು** ಇದರ ಅರ್ಥ 'ನಂಬಿಕೆಯುಳ್ಳವನಗೆ ನೇರವಾಗಿ ಏನನ್ನಾದರೂ ಕಲಿಸಲಾಗುತ್ತದೆ ಮತ್ತು ಕೆಲವೊಮ್ಮೆ ಅವರಿಗೆ ಇನ್ನೊಬ್ಬರ ಮೂಲಕ ಕಲಿಸಲಾಗುತ್ತದೆ. (ತಫ್ಸೀರ್-ಎ-ಕಬೀರ್, ಸಂಪುಟ 9, ಪುಟಗಳು 624-625)

ಉಳಿದ ಭಾಗವನ್ನು ಮುಂದಿನ ಖುತ್‌ಬದಲ್ಲಿ ವಿವರಿಸುತ್ತೇನೆ, ಇನ್ಶಾ-ಅಲ್ಲಾ.

ಇಂದು ರಮಝಾನಿನ ಕೊನೆಯ ಜುಮಾ ಆಗಿದೆ. ಆದ್ದರಿಂದ ಈಗ ನಾನು ಅದರ ಕಡೆಗೆ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಇದನ್ನು ರಮಝಾನಿನ ಕೊನೆಯ ಜುಮಾ ಎಂಬ ರೀತಿಯಲ್ಲಿ ಮಾತ್ರ ಗಣಿಸಬೇಡಿರಿ. ಬದಲಾಗಿ ಇದು ನಮಗೆ ಬರುವ ದಿನಗಳಿಗೆ ಹೊಸ ಮಾರ್ಗವನ್ನು ನಿಶ್ಚಯಿಸುವದ್ದಾಗಿರಬೇಕು. ರಮಝಾನಿನಲ್ಲಿ ಯಾವ ಸಂಗತಿಗಳ ಕಡೆಗೆ ಗಮನವಹಿಸಲಾಯಿತೋ ಮತ್ತು ಯಾವ ಸತ್ಕರ್ಮಗಳನ್ನು ಮಾಡಲು ಸೌಭಾಗ್ಯ ಸಿಕ್ಕಿತ್ತೋ ಅವುಗಳನ್ನು ರಮಝಾನಿನ ನಂತರ ಸಹ ಮುಂದುವರೆಸಲು ಪ್ರಯತ್ನಿಸಬೇಕು, ಮಾತ್ರವಲ್ಲ ಸತ್ಕರ್ಮಗಳನ್ನು ವರ್ಧಿಸುತ್ತಲೇ ಹೋಗಬೇಕು. ನಾವು ಈ ಸತ್ಕರ್ಮಗಳನ್ನು ಮತ್ತು ಪರಿಶುದ್ಧ ಬದಲಾವಣೆಗಳನ್ನು ನೆಲೆನಿಲ್ಲಿಸದಿದ್ದರೆ ಮತ್ತು ಅವುಗಳಲ್ಲಿ ಅಭಿವೃದ್ಧಿಯನ್ನು ಉಂಟುಮಾಡದಿದ್ದರೆ ರಮಝಾನ್ ತಿಂಗಳಿಂದ ದಾಟಿ ಹೋಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಕಳೆದ ಜುಮಾದಲ್ಲಿ ನಾನು ದುರೂದ್ ಪ್ರಾರ್ಥನೆ ಮತ್ತು ಇಸ್ತಿಗ್‌ಫಾರ್ ಕುರಿತು ನಿಮ್ಮ ಗಮನವನ್ನು ಸೆಳೆದಿದ್ದೆ. ಅದು ಕೇವಲ ರಮಝಾನಿನ ತನಕ ಪರಿಮಿತಗೊಳ್ಳದಿರಲಿ. ರಮಝಾನ್ ತಿಂಗಳು ಕೊನೆಗೊಂಡ ನಂತರ ದುಆಗಳನ್ನು ಮತ್ತು ಇಸ್ತಿಗ್‌ಫಾರನ್ನು ಮರೆತು ಬಿಡುವ ರೀತಿಯಲ್ಲಿ ನಾವು ಲೌಕಿಕವಾದ ಕೆಲಸಗಳಲ್ಲಿ ಮುಳುಗದಿರಲಿ. ಈ ಕುರಿತು ಸಹ ನೆನಪಿಡಬೇಕೆಂದು ನಾನು ವಿಶೇಷವಾಗಿ ಹೇಳಿದ್ದೆ. ಈ ಕಾಲಘಟ್ಟದಲ್ಲಿ ದಜ್ಜಾಲಿನ ಕುತಂತ್ರಗಳು ಹೊಸ ಹೊಸ ಅಸ್ತ್ರಗಳನ್ನು ಪ್ರಯೋಗಿಸುತ್ತಿವೆ. ಲೋಕದ ಕಣ್ಣುಕುಕ್ಕುವ ಬೆಳಕು ಹೆಚ್ಚಿನವರನ್ನು ತನ್ನ ವಲಯದಲ್ಲಿ ಸುತ್ತಿ ಹಾಕಿದೆ. ನಮ್ಮ ಯುವಕರು ಮತ್ತು ಮಕ್ಕಳು ಕೂಡ ಕೆಲವೊಮ್ಮೆ ಇದರ ಪ್ರಭಾವಕ್ಕೆ ತುತ್ತಾಗುತ್ತಾರೆ. ಹೀಗಿರುವಾಗ ನಾವು ನಮಗಾಗಿಯೂ ಬಹಳ ದುಆಗಳನ್ನು ಮಾಡಬೇಕಾದ ಆವಶ್ಯಕತೆಯಿದೆ. ಅಲ್ಲಾಹನು ನಮ್ಮನ್ನು ಈ ಪೈಶಾಚಿಕ ಮತ್ತು ದಜ್ಜಾಲಿನ ಆಕ್ರಮಣಗಳಿಂದ ನಮ್ಮನ್ನು ಸುರಕ್ಷಿತಗೊಳಿಸಲಿ.

ತಮ್ಮ ಮಕ್ಕಳನ್ನು ತಮ್ಮೊಂದಿಗೆ ಸೇರಿಸಿಕೊಂಡು ಜೊತೆಗೆ ಇರಿಸಿಕೊಂಡು ಅವರೊಂದಿಗೆ ವಿಶೇಷವಾದ ಸಂಬಂಧವನ್ನು ಉಂಟುಮಾಡಿಕೊಂಡು ಅವರಿಗೆ ಅಲ್ಲಾಹನ ಅಸ್ತಿತ್ವ ಮತ್ತು ಇಸ್ಲಾಮಿನ ಮನೋಹರವಾದ ಆಧ್ಯಾಪನೆಗಳ ಬಗ್ಗೆ ತಿಳಿಸುವುದು ಆವಶ್ಯಕ. ಅವರ ಹೃದಯಗಳಲ್ಲಿ ಅಲ್ಲಾಹನ ಮೇಲಿನ ಸಂಪೂರ್ಣವಾದ ದೃಢವಿಶ್ವಾಸವನ್ನು ಉಂಟುಮಾಡಿಕೊಂಡು ಅವರ ಯಾವುದೇ ಚಲನೆ, ಕೆಲಸ, ಕೃತ್ಯ ಮತ್ತು ಯೋಚನೆ ಅಲ್ಲಾಹನ ಸಂಪ್ರೀತಿಗೆ ವಿರುದ್ಧವಾಗದ ರೀತಿಯಲ್ಲಿ ಅವರನ್ನು ಅಲ್ಲಾಹನೊಂದಿಗೆ ಜೋಡಿಸಿಡಬೇಕು. ಲೌಕಿಕವಾದ ಪ್ರತಿಯೊಂದು ಪಿತೂರಿಗೆ ಅವರ ಬಳಿಯಲ್ಲಿ ಉತ್ತರವಿರಬೇಕು. ಕೆಲವು ಸಂಗತಿಗಳ

ಉತ್ತರ ತಿಳಿಯದಂತೆ ಆಗಿ ಇತರರಿಂದ ಪ್ರಭಾವಿತರಾಗುವಂತೆ ಆಗಬಾರದು. ಅದರ ಉತ್ತರ ಗೊತ್ತಿರುವುದರ ಕಾರಣದಿಂದ ಅವರು ಸ್ವತಃ ಈ ಫಿತ್ನಗಳಿಂದ ಸುರಕ್ಷಿತರಾಗುವಂತೆ ಆಗಬೇಕು. ಇದೇ ನಮ್ಮ ಸಂತಾನಗಳ ಜೀವಿತಗಳನ್ನು ಮನೋಹರವನ್ನಾಗಿ ಮಾಡಿಸುವ ಮತ್ತು ಅವರ ಉಳಿಯುವಿಕೆಗೆ ಕಾರಣವಾಗುವಂತಹ ಸಂಗತಿಯಾಗಿದೆ. ಎಲ್ಲ ವಿಧದ ಫಿತ್ನಗಳಿಂದ ನಮ್ಮ ಸಂತಾನಗಳನ್ನು ಸುರಕ್ಷಿತಗೊಳಿಸಲು ಇರುವ ಸರಿಯಾದ ವಿಧಾನವು ಇದೇ ಆಗಿದೆ. ಆದರೆ ನಮ್ಮ ಸ್ವಂತ ನಂಬಿಕೆ ಮತ್ತು ದೃಢವಿಶ್ವಾಸ ಉನ್ನತ ಮಟ್ಟದ್ದಾಗುವ ವರೆಗೆ ಇದು ಸಾಧ್ಯವಲ್ಲ. ಒಬ್ಬ ಸತ್ಯವಿಶ್ವಾಸಿಯ ವೈಶಿಷ್ಟ್ಯವಾದ ಈ ಮಟ್ಟವನ್ನು ತಲುಪದಿದ್ದರೆ ಇದು ಸಾಧ್ಯವಲ್ಲ. ನಮ್ಮ ಸಂಬಂಧ ಅಲ್ಲಾಹನೊಂದಿಗೆ ಸುದೃಢವಾಗಿದ್ದರೆ ಮಾತ್ರ ಅದು ಸಾಧ್ಯ. ನಮ್ಮ ನಮಾಝ್‌ಗಳು, ನಮ್ಮ ಆರಾಧನೆಗಳು ಉನ್ನತ ಮಟ್ಟದ್ದಾಗಿರಬೇಕು. ನಾವು ನಮ್ಮ ಕರ್ತವ್ಯಗಳನ್ನು ಅರಿತಿರಬೇಕು. ನಾವೇಕೆ ಹಝ್ರತ್ ಮಸೀಹ್ ಮೌಊದ್‌ರನ್ನು ನಂಬಿದ್ದೇವೆ ಎಂದು ಗೊತ್ತಿರಬೇಕು. ನಮ್ಮ ವಿಶ್ವಾಸಗಳನ್ನು ಸುದೃಢಗೊಳಿಸುತ್ತಾ, ನಮ್ಮ ಸತ್ಕರ್ಮಗಳ ಕುರಿತು ಸದಾ ದೃಷ್ಟಿಯಿರಿಸಿಕೊಂಡು ನಮ್ಮ ಸಂತಾನಗಳನ್ನು ರಕ್ಷಿಸಬೇಕೆಂಬುದು ಬಹಳ ಹಿರಿದಾದ ಜವಾಬ್ದಾರಿಯಾಗಿದೆ. ಹಿಂದೆಂದಿಗಿಂತಲೂ ಲಜ್ಜಾಹೀನತೆ ಮತ್ತು ವ್ಯರ್ಥ ಹಾಗೂ ಅನಾವಶ್ಯಕವಾದ ಸಂಗತಿಗಳು ಈ ಕಾಲದಲ್ಲಿ ಮಿತಿಮೀರಿದೆ. ಪ್ರತಿಯೊಂದು ಮನೆಯಲ್ಲಿ ಟಿ.ವಿ. ಮತ್ತು ಇಂಟರ್‌ನೆಟ್ ಮೂಲಕ ಈ ಸಂಗತಿಗಳು ತಲುಪಿವೆ. ಹಿಂದೆ ಹೊರಗೆ ಹೋಗುವುದರಿಂದ ಅಪಾಯದ ಸಾಧ್ಯತೆಯಿತ್ತು. ಈಗಂತು ಮನೆಯೊಳಗೆ ಅಪಾಯವಿದೆ. ರಹಸ್ಯವಾಗಿ ಮಕ್ಕಳು ಕುಳಿತುಕೊಂಡು ನೋಡುತ್ತಿರುತ್ತಾರೆ. ಏನು ನೋಡುತ್ತಿದ್ದಾರೆ ಎಂದು ಯಾರಿಗೂ ಗೊತ್ತೇ ಇಲ್ಲ. ಆದ್ದರಿಂದ ಬಹಳ ಮುನ್ನೆಚ್ಚರಿಕೆ ವಹಿಸಬೇಕಾದ ಆವಶ್ಯಕತೆಯಿದೆ.

ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ಕೊಟ್ಟು ನಮ್ಮ ಅವಸ್ಥೆಗಳ ಬಗ್ಗೆ ಗಮನಹರಿಸಿದರೆ ಮಾತ್ರ ನಾವು ನಮ್ಮನ್ನು ಮತ್ತು ನಮ್ಮ ಸಂತಾನಗಳನ್ನು ರಕ್ಷಿಸಬಹುದು ಎಂಬ ಸಂಗತಿಯನ್ನು ಹಿರಿಯರ ಮತ್ತು ಆರಂಭ ಕಾಲದಲ್ಲಿ ಪ್ರತಿಯೊಂದು ರೀತಿಯ ತ್ಯಾಗಗಳನ್ನು ಮಾಡಿದ ಅಹ್ಮದಿಯರ ಮಕ್ಕಳು ಹಾಗೂ ಸ್ವತಃ ಬೈಅತ್ ಮಾಡಿ ಬಂದು ಕಾಲಘಟ್ಟದ ಇಮಾಮರನ್ನು ನಂಬಿರುವ ಅಹ್ಮದಿಯರು ಸಹ ನೆನಪಿನಲ್ಲಿಡಬೇಕು. ಯಾವುದೇ ಕುಟುಂಬವಿರಲಿ, ಅದು ಯಾರಾದರೂ ಹಿರಿಯರ ಮತ್ತು ಶ್ರೇಷ್ಠ ವ್ಯಕ್ತಿಗಳ ಮಕ್ಕಳ ಕುಟುಂಬವಾದರೂ ಸರಿ, ಆ ಕುಟುಂಬದವರು ಎಂಬ ಕಾರಣದಿಂದ ಮಾತ್ರ ಅಲ್ಲಾಹನು ಯಾವಾಗಲೂ ಅವರನ್ನು ಅನುಗ್ರಹಿಸುವನು ಮತ್ತು ಅವರೊಂದಿಗೆ ಸಂಪ್ರೀತಿಗೊಂಡಿರುವನು ಎಂಬ ಖಾತರಿಯಿಲ್ಲ. ಹೇಗಿದ್ದರೂ ಪ್ರತಿಯೊಬ್ಬ ವ್ಯಕ್ತಿಯ ಸ್ವಂತ ಸತ್ಕರ್ಮಗಳು ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಆವಶ್ಯಕ. ನಮ್ಮ ಸತ್ಕರ್ಮಗಳೇ ನಮ್ಮನ್ನು ರಕ್ಷಿಸುವುದು. ಯಾವುದೇ ಸಂಬಂಧ, ಯಾವುದೇ ಕುಟುಂಬ ಯಾರನ್ನು ರಕ್ಷಿಸದು. ಆದ್ದರಿಂದ ಇದಕ್ಕಾಗಿ ಸದಾ ಬಹಳ ದುಆ ಮಾಡಬೇಕು. ನಮ್ಮ ದೀನೀ ದೌರ್ಬಲ್ಯಗಳ ಬಗ್ಗೆ ದೃಷ್ಟಿಯಿರಿಸಬೇಕು. ನಮ್ಮ ಮಕ್ಕಳು ಭೌತಿಕತೆಗಿಂತ ಧಾರ್ಮಿಕತೆಯಲ್ಲಿ ಪ್ರಗತಿ ಹೊಂದಲು ದುಆ ಮಾಡಬೇಕು. ಭೌತಿಕವಾದ ಅಭಿವೃದ್ಧಿಗಾಗಿ ನಾವು ದುಆಗಳನ್ನು ಮಾಡುತ್ತಿರುತ್ತೇವೆ. ಧಾರ್ಮಿಕವಾದ ಏಳಿಗೆಗಾಗಿ ಅದಕ್ಕಿಂತ ಹೆಚ್ಚು ದುಆ ಮಾಡಬೇಕು.

ಅದೇ ರೀತಿಯಲ್ಲಿ ಸ್ವತಃ ಅಹ್ಮದಿಯಾಗಿರುವವರು ಸಹ ತಮ್ಮ ಯೋಚನೆಗಳನ್ನು ಮತ್ತು ಕೃತ್ಯಗಳನ್ನು ಈ ರೀತಿಯಲ್ಲಿ ನಡೆಸಬೇಕು. ಇದರಿಂದಲೇ ನಮ್ಮ ಉಳಿಯುವಿಕೆ ನಮ್ಮ ಸಂತಾನಗಳ ಉಳಿಯುವಿಕೆ ಇರುವುದು. ಆದ್ದರಿಂದ ರಮಝಾನಿನ ಈ ಉಳಿದ ದಿನಗಳಲ್ಲಿ ಅದಕ್ಕಾಗಿಯೂ ದುಆಗಳನ್ನು ಮಾಡಿರಿ. ಅಲ್ಲಾಹನು ನಮ್ಮ ಮತ್ತು ನಮ್ಮ ಮಕ್ಕಳ ದೀನನ್ನು ಸರಿಯಾಗಿ ಇರಿಸಲಿ. ನಮ್ಮ ಆಧ್ಯಾತ್ಮಿಕ ಅಭಿವೃದ್ಧಿ ಉಂಟಾಗಲಿ. ರಮಝಾನಿನ ನಂತರವೂ ನಮ್ಮ ಆರಾಧನೆಗಳ ಮಟ್ಟ ಉನ್ನತಗೊಳ್ಳುತ್ತಿರಲಿ. ಅಲ್ಲಾಹನೊಂದಿಗೆ ನಮ್ಮ ಸಂಬಂಧ ಸುದೃಢಗೊಳ್ಳಲಿ. ನಾವು ದಜ್ಜಾಲಿನ ಕುತಂತ್ರಗಳಿಗೆ ತುತ್ತಾಗುವುದರಿಂದ ಸುರಕ್ಷಿತರಾಗಲಿ. ಕೇವಲ ಲೌಕಿಕವಾದ ಸೌಲಭ್ಯಗಳು ನಮ್ಮ ಗುರಿಯಾಗದಿರಲಿ. ಬದಲಾಗಿ ಅಲ್ಲಾಹನು ನಮಗೆ ಧಾರ್ಮಿಕ ಮತ್ತು ಭೌತಿಕವಾದ ಅನುಗ್ರಹಗಳನ್ನು ಪ್ರದಾನ ಮಾಡಲಿ. ಅವುಗಳು ನಮ್ಮನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರನ್ನಾಗಿ ಮಾಡಿಕೊಂಡು ಸದಾ ಅವನ ಮುಂದೆ ಬಾಗುವವರನ್ನಾಗಿ ಮಾಡಿಡಲಿ. ನಮ್ಮನ್ನು ಅವನ ಪರಿಪೂರ್ಣ ಆರಾಧನರನ್ನಾಗಿ ಮಾಡಲಿ.

ಅದೇ ರೀತಿಯಲ್ಲಿ ಲೋಕದಲ್ಲಿ ಹರಡಿರುವ ಕೊರೋನ ಮಹಾಮಾರಿಯಿಂದ ರಕ್ಷಣೆ ಪಡೆಯಲು ಮತ್ತು ಅಲ್ಲಾಹನ ಕೃಪೆ ಪಡೆಯಲು ಸಹ ವಿಶೇಷವಾಗಿ ದುಆಗಳನ್ನು ಮಾಡಿರಿ. ಅದೇ ರೀತಿಯಲ್ಲಿ ಅಹ್ಮದಿಯ್ಯತ್ತಿನ ವಿರೋಧ ಶಕ್ತವಾಗಿ ಇರುವ ದೇಶಗಳ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರಿಗೆ ಆರಾಮವನ್ನು ನೀಡಲಿ. ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ಸದಖ, ದಾನಧರ್ಮಗಳು ಮತ್ತು ಪ್ರಾರ್ಥನೆಗಳ ಕಡೆಗೆ ಯಾವಾಗಲೂ ಬಹಳ ಹೆಚ್ಚು ಗಮನವಹಿಸಬೇಕು. ಈ ದುಆಗಳು ಮತ್ತು ಅಲ್ಲಾಹನ ಸಂಪ್ರೀತಿ ಪಡೆಯಲು ಮಾಡುವ ಪ್ರಯತ್ನಗಳು ಶತ್ರುಗಳ ಪ್ರತಿಯೊಂದು ಕುತಂತ್ರ ಮತ್ತು ಹಲ್ಲೆಗಳನ್ನು ವಿಫಲಗೊಳಿಸುವುದು. **ರಬ್ಬಿ ಕುಲ್ಲಿ ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ** ಮತ್ತು **ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧುಬಿಕ ಮಿನ್ ಶುರೂರಿಹಿಂ.** ಈ ದುಆಗಳನ್ನು ಬಹಳವಾಗಿ ಮಾಡಿರಿ. ಆದರೆ ನೆನಪಿಡಿರಿ, ಕೇವಲ ಬಾಯಿಮಾತಿನ ದುಆಗಳು ಕೆಲಸಕ್ಕೆ ಬಾರದು. ಯಾವ ದುಆವನ್ನು ಮಾಡಬೇಕೆಂದು ಜನರು ಪತ್ರಗಳನ್ನು ಬರೆದು ನನ್ನೊಡನೆ ಕೇಳುತ್ತಿರುತ್ತಾರೆ. ಎಲ್ಲಿಯ ವರೆಗೆ ನಾವು ನಮ್ಮ ನಮಾಝ್‌ಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವುದಿಲ್ಲವೋ, ಎಲ್ಲಿಯ ವರೆಗೆ ಅವುಗಳನ್ನು ಮಾಡಬೇಕಾದ ರೀತಿಯಲ್ಲಿ ಮಾಡುವುದಿಲ್ಲವೋ ಅಲ್ಲಿಯ ವರೆಗೆ ಕೇವಲ ಬಾಯಿಮಾತಿನ ದುಆಗಳಿಂದ ಪ್ರಯೋಜನವಿಲ್ಲ. ರಮಝಾನಿನಲ್ಲಿ ನಮಾಝಿನ ಕಡೆಗೆ ಕಾಳಜಿ ವಹಿಸಲಾದ ರೀತಿಯಲ್ಲೇ ರಮಝಾನ್ ನಂತರ ಸಹ ಅದು ಮುಂದುವರೆಸಬೇಕು. ಆಗಲೇ ಅಲ್ಲಾಹನ ಕಾರುಣ್ಯ ಮತ್ತು ಸಹಾಯವನ್ನು ನಾವು ಸರಿಯಾದ ರೀತಿಯಲ್ಲಿ ಗಳಿಸುವವರಾಗುವೆವು. ಎಲ್ಲ ರೀತಿಯ ಪಿತೂರಿಗಳಿಂದ ರಕ್ಷಣೆ ಪಡೆಯಲು ದುಆ ಮಾಡಿರಿ. ರಮಝಾನಿನ ಉಳಿದಿರುವ ನಾಲ್ಕೈದು ದಿನಗಳನ್ನು ವಿಜಯಕರವಾಗಿ ದಾಟುವವರಾಗಲಿ. ಅನಂತರ ರಮಝಾನಿನ ನಂತರ ಈ ಒಳಿತುಗಳನ್ನು ಮುಂದುವರೆಸುವವರಾಗಲಿ. ನಾವು ನಮ್ಮ ದುಆಗಳ ಕ್ಷೇತ್ರವನ್ನು ಅಥವಾ ವಲಯವನ್ನು ಎಷ್ಟು ವರ್ಧಿಸುತ್ತೇವೆಯೋ ಅಷ್ಟೇ ಅಲ್ಲಾಹನ ಅನುಗ್ರಹಗಳು ನಮ್ಮ ಮೇಲೆ ವರ್ಷಿಸಲ್ಪಡುವುವು. ಆದ್ದರಿಂದ ವಿಶೇಷವಾಗಿ ಪ್ರತಿಯೊಬ್ಬ ಅಹ್ಮದಿಯ ಪ್ರತಿಯೊಂದು ಕಷ್ಟತೆಯನ್ನು ದೂರೀಕರಿಸಲು ದುಆ ಮಾಡುತ್ತಿರಬೇಕು. ಇದರಿಂದ ನಮಗೆ ಅರಿವಿಲ್ಲದೆಯೇ ಪರಸ್ಪರ ಪ್ರೀತಿ ಪ್ರೇಮ ಮತ್ತು ಸಾಹೋದರ್ಯ ಸಂಬಂಧದ ವಾತಾವರಣ ಸೃಷ್ಟಿಯಾಗುವುದು. ಅಲ್ಲಾಹನ ಅನುಗ್ರಹಗಳಿಂದ ಒಂದಂಶ ಸಿಗುವುದರೊಂದಿಗೆ ಪರಸ್ಪರ ಪ್ರೀತಿ ಪ್ರೇಮ ಉಂಟಾಗುವುದು. ಮುಸ್ಲಿಂ ಸಮುದಾಯಕ್ಕಾಗಿಯೂ ದುಆ ಮಾಡಿರಿ. ಕಾಲಘಟ್ಟದ ಇಮಾಮನ್ನು ನಿರಾಕರಿಸಿಕೊಂಡು ಇಹಪರಲೋಕ ಜೀವನವನ್ನು ಹಾನಿಗೊಳಿಸುತ್ತಾ ದುರ್ಮಾರ್ಗದ ಕಡೆಗೆ ಹೋಗುತ್ತಿದ್ದಾರೆ. ಅಲ್ಲಾಹನು ಅವರನ್ನು ಅದರಿಂದ ಸಂರಕ್ಷಿಸಲಿ. ಮನುಷ್ಯಕುಲಕ್ಕೆ ಒಟ್ಟಾಗಿ ಸಹ ದುಆ ಮಾಡಿರಿ. ಅಲ್ಲಾಹನು ಅವರನ್ನು ಸಹ ಸರಿಯಾದ ಮಾರ್ಗದಲ್ಲಿ ನಡೆಸಲಿ. ಅಲ್ಲಾಹನ ಕೋಪದಿಂದ ರಕ್ಷಣೆ ಪಡೆಯಲು ಸೌಭಾಗ್ಯ ನೀಡಲಿ. ಹೇಗಿದ್ದರೂ ನಮ್ಮ ಕೆಲಸ ದುಆಗಳನ್ನು ಮಾಡುವುದು ಮತ್ತು ದುಆಗಳನ್ನು ಮಾಡುತ್ತಾ ಹೋಗುವುದಾಗಿದೆ. ರಮಝಾನಿನಲ್ಲೂ ರಮಝಾನಿನ ನಂತರವೂ . ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಾನು ನನ್ನ ಖಾಲಿ ಪೆಟ್ಟಿಗೆಯನ್ನು ನೋಡಿ ನನಗೆ ಅಲ್ಲಾಹನ ಮೇಲೆ ದೃಢ ನಂಬಿಕೆ ಬರುತ್ತದೆ. ಇದು ಅವಶ್ಯವಾಗಿ ತುಂಬಲ್ಪಡುವುದು. ಅದು ಹಾಗೆಯೇ ಸಂಭವಿಸುತ್ತದೆ. "ಮತ್ತೆ ಅವರು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳಿದರು.

"ಎಂದು ನನ್ನ ಕಿಸೆ ಖಾಲಿಯಾಗಿರುತ್ತದೆ. ಆ ಸಮಯ ಅಲ್ಲಾಹನ ಮೇಲೆ ಉಂಟಾಗುವ ಭರವಸೆ, ಉತ್ಸಾಹ ಮತ್ತು ಕುತೂಹಲ ಹೇಳತೀರದು. ಆ ಸಮಯದ ಸಂತೋಷ ನೆಮ್ಮದಿ ಹಣದಿಂದ ತುಂಬಿರುವ ಕಿಸೆಗಿಂತಲೂ ಹೆಚ್ಚಾಗಿರುತ್ತದೆ. ಮತ್ತೆ ಹೇಳಿದರು.

"ಆ ದಿನಗಳ ಮಾತು, ಆಗ ತಂದೆಯರು ಮತ್ತು ನನ್ನ ಅಣ್ಣ ನಾನಾತರಹದ ದುಃಖದಾಯಕ ಸಮಸ್ಯೆಗಳಲ್ಲಿ ಸಿಲುಕಿಸುತ್ತಿದ್ದರು. ಅವರುಗಳು ನನ್ನ ಸ್ಥಿತಿ ನೋಡಿ ಅಚ್ಚರಿಪಡುತ್ತಿದ್ದರು ಮತ್ತು ಹೇಳುತ್ತಿದ್ದರು. ಇವನು ತುಂಬ ಭಾಗ್ಯವಂತನಾಗಿದ್ದಾನೆ. ಇವನ ಹತ್ತಿರ ಯಾವ ದುಃಖವು ಸುಳಿಯುವುದಿಲ್ಲ." **(ಮಲ್ಫೂಝಾತ್ ಸಂಪುಟ–1, ಪುಟ–296–297, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬಹುಸಂಖ್ಯಾತರಾಗಿರುವ ಬಗ್ಗೆ ಗರ್ವವಿದೆಯೇ, ಆದರೆ ಇಷ್ಟಾದರೂ ಯೋಚಿಸಿ ಬಹುಸಂಖ್ಯಾತರಾಗಿರುವುದು ಯಾವತ್ತೂ ಹಿತಕರವಾಗಿರುತ್ತದೆಯೇ, ಕುರುಡರು ಒಟ್ಟಾದರೆ ಅದೇನು ಶಕ್ತಿಯ ಒಟ್ಟುಗೂಡಿಕೆಯೇ? ಅಥವಾ ದುರ್ಬಲರ ಒಟ್ಟುಗೂಡಿಕೆಯೇ? ಒಬ್ಬ ದೃಷ್ಟಿಯುಳ್ಳವನು ಸಾವಿರಾರು ಕುರುಡರ ಮೇಲೆ ಮೇಲುಗೈ ಸಾಧಿಸುತ್ತಾನೆ. ಅದೇ ರೀತಿ ಪ್ರವಾದಿ ಮತ್ತು ಅವನ ಅನುಯಾಯಿಗಳು ಅಲ್ಲಾಹನಿಂದ ಜ್ಞಾನ ಪಡೆಯುತ್ತಾರೆ. ನಿಮ್ಮ ಯೋಜನೆ ಮತ್ತು ಎಲ್ಲ ಕಾರ್ಯತಂತ್ರಗಳಿಂದ ದೇವವಾಣಿಯ ಮುಖಾಂತರ ಅವರಿಗೆ ಅವಗತವಾಗಿಸುತ್ತದೆ. ಅಂದ ಹಾಗೆ ಅವರ ಉದಾಹರಣೆ ದೃಷ್ಟಿಯುಳ್ಳವನ ರೀತಿಯಾಗಿದೆ ಎಂದು. ಏಕೆಂದರೆ ಅವರ ಎಲ್ಲ ಪ್ರಯತ್ನಗಳ ಹಿಂದೆ ದೇವನ ಪುಷ್ಟಿಯಿದೆ. ದೇವನ

ಗೌಪ್ಯ ಪ್ರಭಾವ ಅವರ ಮೇಲಿದೆ. ಅದರಿಂದ ನೀವು ಬಹುದೂರದವರಾಗಿದ್ದೀರಿ. ಈಗ ನೀವೇ ಯೋಚಿಸಿ. ಅವರ ಮತ್ತು ಅವರ ಅನುಯಾಯಿಗಳ ವಿರುದ್ಧ ಹೋರಾಡಬಹುದೇ, ಅವರು ಅಲ್ಪಸಂಖ್ಯೆಯಲ್ಲಿದ್ದರೆ ಏನಾಯಿತು, ದೃಷ್ಟಿಯುಳ್ಳವರಾಗಿದ್ದಾರೆ. "ಹಲ್ ತಸ್ತವಿಝ್-ಝುಲುಮಾತು ವನ ನೂರ್" ಅಂಧಕಾರ ಮತ್ತು ಪ್ರಕಾಶ ಸಮಾನವೇ? ಅಂಧಕಾರ ಎಂದೂ ಪ್ರಕಾಶವನ್ನು ಎದುರಿಸಲಾರದು. ಅಲ್ಪ ಪ್ರಮಾಣದ ಪ್ರಕಾಶ ಇಡೀ ಕೋಣೆಯ ಅಂಧಕಾರವನ್ನು ದೂರಮಾಡುತ್ತದೆ. ಅಂಧಕಾರಕ್ಕೆ ಅಸ್ತಿತ್ವವೇ ಇಲ್ಲ. ಪ್ರಕಾಶಕ್ಕೆ ಅಸ್ತಿತ್ವವಿದೆ. ಅಸ್ತಿತ್ವಕ್ಕೆ ಅಳಿವುಂಟು, ಅಂಧಕ್ಕಾರಕ್ಕೆ ಅಳಿವಿಲ್ಲ. ಅಂದರೆ ನಿಮ್ಮ ಬಳಿ ದೈವಿಕ ಶಿಕ್ಷಣವಿಲ್ಲ. ಅವರ ಬಳಿಯಿದೆ. ಅಂದ ಹಾಗೆ ನಿಮ್ಮ ಮತ್ತು ಅವರ ನಡುವೆ ಎತ್ತಣದ ಸ್ಪರ್ಧೆ. ಅವರ ಶಿಕ್ಷಣ ಸಾಕ್ಷ್ಯಗಳ ಬುನಾದಿಯ ಮೇಲೆ ನಿಂತಿದೆ, ನಿಮ್ಮ ಶಿಕ್ಷಣ ಕೇವಲ ಅಜ್ಞಾನತೆ ಮತ್ತು ಧಿಕ್ಕರಿಸುವುದಾಗಿದೆ. "ಅಮ್ ಜವಾಲು . . . . . ಈ ಮಾತು ಬಹುದೇವರಾಧಕರ ಮುಂದೆ ಆಕ್ಷೇಪದ ರೀತಿಯಲ್ಲಿ ಪ್ರಸ್ತುತಪಡಿಸಲಾಗಿದೆ. ಅಂದರೆ ನೀವು ಬಹುದೇವರಾಧಕರಾಗಿಯೂ ಅವರ ಸೃಷ್ಟಿ ಸಾಬೀತುಪಡಿಸಲಾರರು. ಅಥವಾ ದೇವನ ಸೃಷ್ಟಿಗೆ ಸಮಾನ ಎಂದು ತೋರಿಸಲಾರರು. ಅಂದ ಹಾಗೆ ಮಕ್ಕದ ಬಹುದೇವರಾಧಕರು ಈ ಮಾತನ್ನು ಹೇಳುವ ಸಾಹಸ ಮಾಡಲಿಲ್ಲ. ಅದಾಗ್ಯೂ ಕೆಲವರ ಮತ್ತು ಕೆಲವು ದೇಶಗಳ ಬಹುದೇವರಾಧಕರು ತನ್ನ ಆರಾಧ್ಯರ ಕುರಿತು ಇಂತಹ ವಾದ ಮಂಡಿಸಿದ್ದುಂಟು. ಅಕಟಾ! ಮುಸಲ್ಮಾನರು ಸಹ ಈ ಕಾಲಘಟ್ಟದಲ್ಲಿ ಇಂತಹ ಮಾತುಗಳನ್ನು ಹೇಳಲು ಪ್ರಾರಂಭಿಸಿದ್ದಾರೆ. ಹಜ್‌ರತ್ ಮಸೀಹ್(ಅ) ಪಕ್ಷಿಗಳನ್ನು ಸೃಷ್ಟಿಸುತ್ತಿದ್ದರು ಎಂದು ಹೇಳುತ್ತಾರೆ. ಕೆಲವರಂತೂ ಹೀಗೂ ಹೇಳುತ್ತಾರೆ. ಅಲ್ಲಾಹನು ಸೃಷ್ಟಿಸಿದ ಪಕ್ಷಿಗಳೂ ಯಾವುವು ಮತ್ತು ಹಝ್ರತ್ ಮಸೀಹ್ ಸೃಷ್ಟಿಸಿದ ಪಕ್ಷಿಗಳವುವು ಗುರುತಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು. ನಾನು ಒಬ್ಬ ಮೌಲ್ವಿಗೆ ಕೇಳಿದೆ. ನೀವು ಹಝ್ರತ್ ಮಸೀಹರು ಪಕ್ಷಿಗಳನ್ನ ಸೃಷ್ಟಿಸುತ್ತಿದ್ದರು ಎನ್ನುತ್ತೀರಿ. ಕೊನೆಗೆ ಯಾವುದನ್ನು ಅವರು ಸೃಷ್ಟಿಸಿದ್ದಾರೆ ಎನ್ನುವಾಗ ಉತ್ತರ ನೀಡಿದರು. ಬಾವಲಿ ಎಂದು. ಆಗ ನಾನು ಅವರೊಂದಿಗೆ ಕೇಳಿದೆ. ಮಸೀಹನ ಬಾವಲಿಗಳು ಯಾವುವು ಮತ್ತು ಅಲ್ಲಾಹನು ಸೃಷ್ಟಿಸಿದ ಬಾವಲಿಗಳು ಯಾವುವು. ಆಗ ಆ ಮೌಲ್ವಿ ಸಾಹಿಬ್ ಹೇಳಿದರು. ಈಗ ಗುರುತಿಸಲಿಕ್ಕೆ ಆಗುವುದಿಲ್ಲ. ಪಂಜಾಬಿ ಭಾಷೆಯಲ್ಲಿ ಹೇಳಿದರು. "ಓಹನ್ ರಲ್‌ಮಲ್ ಗಯಾಂನೆ." ಅಂದರೆ ಇದೀಗ ಅವು ಅಲ್ಲಾಹನು ಸೃಷ್ಟಿಸಿದ ಬಾವಲಿಗಳಲ್ಲಿ ಸೇರಿಯಾಗಿದೆ.

ಅಕಟಾ! ಯಾವ ಮಾತು ಹೇಳುವ ಧೈರ್ಯ ಮಕ್ಕದ ಬಹುದೇವಾರಾಧಕರಿಗೆ ಸಾಧ್ಯವಾಗಲಿಲ್ಲ. ಅದನ್ನು ಎಷ್ಟು ಧೈರ್ಯದಿಂದ ಮುಸಲ್ಮಾನರು ಹೇಳುತ್ತಿದ್ದಾರೆ! ಇಷ್ಟಾದರೂ ಯೋಚಿಸಲಿಲ್ಲ. ಈ ಬುಡವಿಲ್ಲದ ಮಾತು ಯಾರಿಗೆ ಒಪ್ಪಲು ಸಾಧ್ಯ.

**(ತಫ್ಸೀರ್ ಕಬೀರ್ ಸಂ. 3 ಪುಟ 402 ಮುದ್ರಣ ಖಾದಿಯಾನ್ 2010)**

***(ಪುಟ ಸಂಖ್ಯೆ 02ರ ಉಳಿದ ಭಾಗ)***

ಮೊದಲಿಗರಾಗಿದ್ದರು. ಆಗಲೂ ಹಝ್ರತ್ ಅಬೂಬಕರ್ ಹೆಸರಿಸದೇ ಬೇರೆ ಮಾರ್ಗವಿರಲಿಲ್ಲ. ಮತ್ತೆ ಇದನ್ನೂ ಕೇಳಿ ವಂಚಕರೇ ಆಗಲಿ. ಆದರೆ ಮೊದಲು ಖಲೀಫ ಆಗಿ ಆಯ್ಕೆಯಾದವರು ಯಾರಾಗಿದ್ದರು? ಆಗಲು ಹಝ್ರತ್ ಅಬೂಬಕರ್ ಹೆಸರು ಹೇಳಧೆ ಬೇರೆ ದಾರಿ ಇಲ್ಲ. ಮತ್ತೆ ಕೇಳಿರಿ. ದೇಶ ದೇಶಗಳಲ್ಲಿ ಪ್ರಚಾರಕ್ಕಾಗಿ ಖುರ್‌ಆನ್ ಸಂಗ್ರಹಿಸಿದವರು ಯಾರಾಗಿದ್ದರು? ಆಗಲೂ ನಿರ್ವಾಹವಿಲ್ಲದೇ ಹೇಳುವರು ಹಝ್ರತ್ ಅಬೂಬಕರ್. ಮತ್ತೆ ಕೇಳಿರಿ, ಖೈರುಲ್ ಮುರ್ಸಲೀನ್ ಹಾಗೂ ಸಯ್ಯದ್‌ನಾ ಮಅಸುಮೀನ್(ಸ) ರವರ ಪಕ್ಕದಲ್ಲಿ ಯಾರು ದಫನ್ ಆಗಿದ್ದಾರೆ, ಆಗಲೂ ಹೇಳದೇ ನಿರ್ವಾಹವಿಲ್ಲ. ಹಜ್‌ರತ್ ಅಬೂಬಕರ್ ಮತ್ತು ಹಝ್ರತ್ ಉಮರ್(ರ) ಹಾಗಿರುವಾಗ ಎಷ್ಟು ಆಶ್ಚರ್ಯಕರ ಮಾತಲ್ಲವೇ (ಮಝುಲ್ಲಾಹ್) ಪ್ರತಿಯೊಂದು ಅನುಗ್ರಹವು ಧಿಕ್ಕಾರಿಗಳಿಗೆ ಹಾಗೂ ಕಪಟ ವಿಶ್ವಾಸಿಗಳಿಗೆ ನೀಡಲಾಯಿತು. ಮತ್ತು ಇಸ್ಲಾಂ ಧರ್ಮದ ಎಲ್ಲ ಕಾರುಣ್ಯಗಳು ಅನುಗ್ರಹಗಳು ಶತ್ರುಗಳ ಕೈಗಳಿಂದ ನೆರವೇರಿತು. (ಅದೇ ಪುಟ 75)

**ಹಝ್ರತ್ ಅಬೂಬಕರ್ ಕಾಫಿರ್, ಮುನಾಫಿಖ್ ಎಂದಾಗಿದ್ದರೆ ಹಝ್ರತ್ ಅಲಿ ಏಕೆ ಅವರ ಬೈಅತ್ ಮಾಡಿದರು?**

ಮತ್ತೆ ವಿಚಿತ್ರ ಅತಿ ವಿಚತ್ರವಾದ ಮಾತೆಂದರೆ. ಅವರು (ಅಂದರೆ ಹಝ್ರತ್ ಅಲಿ) ಕೇವಲ ಬೈಅತ್ ಅಷ್ಟೇ ಮಾಡಲಿಲ್ಲ. ಬದಲು ಎಲ್ಲ ನಮಾಝುಗಳು ಹಝ್ರುತ್ ಅಬೂಬಕರ್ ಮತ್ತು ಹಝ್ರುತ್ ಉಮರ್(ರ) ಅವರ ನೇತೃತ್ವದಲ್ಲಿ ನಿರ್ವಹಿಸಿದರು. ಯಾವತ್ತಿಗೂ ತಕರಾರು ಎತ್ತಲಿಲ್ಲ. ಆಕ್ಷೇಪ ಮಾಡಲಿಲ್ಲ. ಅವರ ಶೂರಅ (ಸಲಹಾ ಸಭೆ) ಯಲ್ಲಿ ಭಾಗವಹಿಸಿದರು. ಅವರ ನಿರ್ಣಯಗಳನ್ನು ಒಪ್ಪಿದರು. ಎಲ್ಲಾ ಸಮಯಗಳಲ್ಲೂ ಪೂರ್ಣ ಧೈರ್ಯದಿಂದ ಮತ್ತು ಸಾಮರ್ಥ್ಯಕ್ಕೆ ಅನುಸಾರ ಅವರಿಗೆ ನೆರವಾದರು. ಎಂದೂ ಹಿಂದೆ ಬೀಳುವವರಲ್ಲಿ ಆಗಿರಲಿಲ್ಲ. ಆದುದರಿಂದ ಯೋಚಿಸಿರಿ. ಇದು ಅತಿಕರ್ಮಿಗಳ ಮತ್ತು ಧಿಕ್ಕಾರಿಗಳ ಸಂಕೇತವೇ? ಮತ್ತೊಮ್ಮೆ ಯೋಚಿಸಿರಿ. ಅವರು ವಂಚಕರು, ಸುಳ್ಳುಗಾರರು ಎಂದು ತಿಳಿದ ಮೇಲೂ ಹಝ್ರತ್ ಅಲಿ ಏಕೆ ಅವರನ್ನು ಅನುಸರಿಸಿದರು? (ಅದೇ ಪುಟ 90)

ನಾವು ಶಿಯಾಗಳಲ್ಲಿ ಯಾರನ್ನು ಸಹ ಸಜ್ಜನರಾಗಿ ಕಾಣಲಿಲ್ಲ ಮತ್ತು ಯಾರೊಬ್ಬರನ್ನು ಸಹ ಭಯಭಕ್ತಿಯುಳ್ಳವರಾಗಿ ಕಾಣಲಿಲ್ಲ. ಯಾರು ಹಝ್ರತ್ ಅಬೂಬಕರ್ ಅವರೊಂದಿಗೆ ಹಗೆತನ ಸಾಧಿಸುವರೋ ಅಂತಹವನ ಮಧ್ಯ ಒಂದು ತೆರೆಯಲಾಗದಂತಹ ಬಾಗಿಲು ಅಡ್ಡಬರುವುದು. ಅದು ಸತ್ಯಸಂಧಕರ ಸರದಾರರಾದ ಹಝ್ರತ್ ಅಬೂಬಕರ್ ಅವರೊಡನೆ ರುಜು ಮಾಡದೇ ತೆರೆಯಲ್ಪಡದು. ಅದೇ ಕಾರಣದಿಂದ ನಾವು ಶಿಯಾಗಳಲ್ಲಿ ಯಾರನ್ನೂ ಸಹ ಸಜ್ಜನರಲ್ಲಿ ಕಾಣಲಿಲ್ಲ. ಮತ್ತು ಯಾರೊಬ್ಬರು ಸಹ ಭಯಭಕ್ತಿಯುಳ್ಳವರಾಗಿ ಕಾಣಲಿಲ್ಲ. ನಿಶ್ಚಯವಾಗಿಯೂ ಅವರ ದುಷ್ಕರ್ಮಿಗಳು ಅಲ್ಲಾಹನಿಗೆ ಇಷ್ಟವಿಲ್ಲದವರಾಗಿದ್ದೇವೆ. ಮತ್ತೊಂದು ಕಾರಣವೆಂದರೆ ಅವರು ಸಜ್ಜನರೊಂದಿಗೆ ಹಗೆತನ ಸಾದಿಸುವವರಾಗಿದ್ದಾರೆ. (ಅದೇ ಪುಟ 100).

**ಹಝ್ರತ್ ರಸೂಲುಲ್ಲಾಹ್(ಸ) ಅಬೂಬಕರ್‌ರವರಲ್ಲದೇ ಯಾರ ಹೆಸರು ಸಹ ಸಿದ್ದಿಖ್ ಎಂದೂ ಕರೆಯಲಿಲ್ಲ.**

ಅಲ್ಲಾಹನು ಪ್ರವಾದಿಗಳ ತಕ್ಷಣ ಸಿದ್ಧೀಖರ ವಿವರಣೆ ನೀಡಿದ್ದಾನೆ. ಅಂದ ಹಾಗೆ ಅಲ್ಲಾಹನು ಹೇಳಿದನು. **"ಫುಉಲಾಇಕ ಮಅಲ್ಲಝೀನ ಅನ್‌ಅಮುಲ್ಲಾಹು ಅಲೈಹಿಮ್ಮಿನನ್ನಬೀಈನ ವ ಸ್ಸಿದ್ದೀಖೀನ ವ ಶ್ಶುಹದಾಇ ವಸ್ಸಾಲಿಹೀನ"** ಈ ವಚನದಲ್ಲಿ ಸಿದ್ಧೀಖ್ (ಅಕ್ಬರ್) ಮತ್ತು ಅವರ ಇತರ ಮಹಿಮೆಯತ್ತ ಸಂಕೇತಿಸಿದ್ದಾನೆ. ಏಕೆಂದರೆ ನಬಿ(ಸ) ಸಹಾಬರುಗಳಲ್ಲಿ ಯಾರ ಹೆಸರನ್ನು ಸಹ "ಸಿದ್ಧೀಖ್" ಎಂದು ಕರೆಯಲಿಲ್ಲ. ಅದರಿಂದ ಅವರ ಉನ್ನತ ದರ್ಜೆ ಸ್ಪಷ್ಟವಿದೆ. ಹಾಗೆಯೇ ನಾವು ಸಹಾಬರುಗಳಲ್ಲಿ ಯಾರೊಬ್ಬರಿಗೂ ಈ ಬಿರುದು ಲಭಿಸಿದ್ದು ಕಾಣಲಿಲ್ಲ. ಅಂದ ಹಾಗೆ ಸಿದ್ಧೀಖರ ಸ್ಥಾನಮಾನ ಇದರಿಂದ ಸಾಬೀತಾಯಿತು. ಏಕೆಂದರೆ ಪ್ರವಾದಿಗಳ ನಂತರ ಅವರನ್ನು ಹೆಸರಿಸಲಾಗಿದೆ. (ಅದೇ ಪುಟ 105)

**ಜಾಗೃತ ಅವಸ್ಥೆಯಲ್ಲಿ ಹಝ್ರತ್ ಅಲಿ ಅವರೊಂದಿಗೆ ಭೇಟಿ**

ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗೆ ಅದರ ಬಗ್ಗೆ, ಅವರ ಬಗ್ಗೆ ನುಡಿಯುತ್ತಾರೆ. ಅವರಿಗೆ (ಹಝ್ರತ್ ಅಲಿ) ಖುರ್‌ಆನ್‌ನ ಜ್ಞಾನ ಮತ್ತು ಮಹಿಮೆಯ ಕುರಿತು ಒಂದು ಅದ್ಭುತವಾದ ಅರಿವು ನೀಡಲಾಗಿತ್ತು. ನಾನು ಜಾಗೃತ ಅವಸ್ಥೆಯಲ್ಲಿ ಅವರನ್ನು ಕಂಡಿದ್ದೆನೆಯೇ ಹೊರತು ನಿದ್ರಾವಸ್ಥೆಯಲ್ಲಿ ಅಲ್ಲ. ಮತ್ತು ಅದೇ ಅವಸ್ಥೆಯಲ್ಲಿ ಅವರು, ಸರ್ವಜ್ಞನಾದ ಅಲ್ಲಾಹನ ಗ್ರಂಥದ ತಫ್ಸೀರ್ (ವ್ಯಾಖ್ಯಾನ ರೂಪ) ನನಗೆ ನೀಡಿದರು. ಮತ್ತು ಹೇಳಿದರು. ಇದು ನನ್ನ ತಫ್ಸೀರ್ ಆಗಿದೆ. ಇದನ್ನು ನಿಮಗೆ ನೀಡಲಾಗುತ್ತದೆ. ನಿಮಗೆ ಇದು ಶುಭವಾಗಲಿ. ಆಗ ನಾನು ನನ್ನ ಕೈ ಒಡ್ಡಿ ಆ ತಫ್ಸೀರ್ ಪಡೆದುಕೊಂಡಿದ್ದೇನೆ. ಮತ್ತು ನಾನು ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಿದೆ. ನಾನು ಅವರನ್ನು ನಡತೆಯಲ್ಲಿ ಉತ್ತಮರಾಗಿ, ಸದೃಢರಾಗಿ ಮತ್ತು ವಿನಯವಂತರಾಗಿ ಪ್ರಕಾಶಮಯರಾಗಿ ಕಂಡೆನು. ನಾನು ಪ್ರಮಾಣ ಮಾಡಿ ಹೇಳಬಲ್ಲೆನು. ಅವರು ನನ್ನೊಡನೆ ತುಂಬ ಪ್ರೀತಿಯಿಂದ, ಸ್ನೇಹದಿಂದ ಭೇಟಿಯಾದರು. ಮತ್ತು ನನ್ನ ಹೃದಯದಲ್ಲಿ ಈ ಮಾತು ಹಾಕಲಾಯಿತು. ಅವರು ನನಗೆ ಮತ್ತು ನನ್ನ ವಿಶ್ವಾಸಗಳನ್ನು ಅರಿತವರಾಗಿದ್ದರೆ ಎಂದು. ನಾನು ಹೊಂದಿದ ನಿಲುವು ಮತ್ತು ಶಿಯಾರವರೊಂದಿಗೆ ಇರುವ ಭಿನ್ನತೆಯೂ ಸಹ ಅವರು ತಿಳಿದವರಾಗಿದ್ದರು. ಆದರೆ ಅವರು ಯಾವುದೆ ತರಹದ ಅಸಂತೋಷ ವ್ಯಕ್ತಪಡಿಸಲಿಲ್ಲ. ನನ್ನಿಂದ ದೂರವು ಸರಿಯಲಿಲ್ಲ. ಬದಲು ಅವರು ತುಂಬ ಆತ್ಮೀಯತೆಯಿಂದ, ಪ್ರೀತಿಯಿಂದ ನನ್ನೊಡನೆ ವರ್ತಿಸಿದರು. (ಅದೇ ಪುಟ 110)

**ಐದು ಸಾವಿರ ರೂಪಾಯಿಗಳ ವೈಭವಯುತ ಬಹುಮಾನದ ಪಂಥಾಹ್ವಾನ**
**ಒಂದು ವರ್ಷದೊಳಗೆ ನನ್ನ ಪ್ರಾರ್ಥನೆ ಫಲಕೊಡದಿದ್ದರೆ ನಾನು ಯಾವುದೇ ಶಿಕ್ಷೆಯನ್ನು ಸ್ವೀಕರಿಸುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ಗ್ರಂಥದ ಮೂಲಕ ಶಿಯಾ ಅವರ ಮೇಲೆ ನ್ಯಾಯಪೂರ್ತಿಕರಣ ಮಾಡಿದಂತಾಗಿದೆ. ಈ ಗ್ರಂಥವು ಇನ್‌ಶಾಅಲ್ಲಾಹ್ ಶಿಯಾ ಅವರುಗಳಿಗೆ ಸನ್ಮಾರ್ಗ ಪಡೆಯಲು ಒಂದು ಮೂಲಭೂತ ಪಾತ್ರ ವಹಿಸುವುದು ಎಂದು ನಂಬಿದ್ದೇನೆ.

ಹಝ್ರತ್ ಮಸೀಹ್ ಮೌಊದ್(ಅ) ಈ ಸಮಸ್ಯೆಯನ್ನು ನಿರ್ಣಾಯಕ ಹಂತಕ್ಕೆ ತರಲು ಶಿಯಾಗಳ ವಿಶ್ವಾಸಗಳು ಇಸ್ಲಾಂ ಧರ್ಮಕ್ಕೆ ಅನುಗುಣವಾಗಿದೆಯೇ ಅಥವಾ ಸುನ್ನತಲ್ ಜಮಾಅತ್, ಮುಬಾಹಲಕ್ಕಾಗಿ ಆಹ್ವಾನಿಸಿದರು. ಉಭಯತ್ರರು ಸುಳ್ಳುಗಾರರ ಮೇಲೆ ಶಾಪವನ್ನು ಬಯಸಲಿ. ಒಂದು ವರ್ಷದವರೆಗೆ ಹಝ್ರತ್ ಮಸೀಹ್ ಮೌಊದ್(ಅ) ಹಾಕಿದ ಶಾಪ ಮಾಡಿದ ಪ್ರಾರ್ಥನೆ ಶಿಯಾಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ ಎಂದಾದರೆ. ಶಿಯಾ ಅವರು ಸತ್ಯವಂತರು ಎಂದು ಭಾವಿಸಲಾಗುವುದು. ಹೀಗಾಗಿದ್ದಲ್ಲಿ ಅವರು ತನಗಾಗಿ ಕೊಡುವ ಯಾವುದೇ

ದೊಡ್ಡ ಶಿಕ್ಷೆಯನ್ನಾಗಲೀ ಸ್ವೀಕರಿಸುವೆನು. ಅಲ್ಲದೇ ಅದರ ಜೊತೆಯಲ್ಲಿ ತಮ್ಮ ಎದುರಾಳಿಗೆ ಐದು ಸಾವಿರ ರೂಪಾಯಿಗಳ ಬಹುಮಾನ ನಿಗದಿಗೊಳಿಸಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಇಸ್ತೆಬ್ಲಾಪ್ ವಚನ ಮತ್ತು ಇತರ ವಚನಗಳಿಂದ ಸಯ್ಯದ್‌ನಾ ಹಝ್ರತ್ ಅಬೂಬಕರ್(ರ) ರವರ ಖಿಲಾಫತ್ ಸಮರ್ಥನೆಗೆ ವಿವರ ನೀಡುತ್ತಾ ಹೇಳಿದು.

ಈ ಎಲ್ಲ ವಚನಗಳು ಸಿದ್ದೀಖ್ ರವರ ಖಿಲಾಫತ್ತಿನ ಸುವಾರ್ತೆ ನೀಡುತ್ತದೆ. ಅದನ್ನು ಯಾರೊಬ್ಬರ ಮೇಲೆ ತಾಳೆ ಹಾಕಲು ಸಾಧ್ಯವಿಲ್ಲ. ಅಂದಹಾಗೆ ಸಂಬೋಧಿತ ರೀತಿಯಲ್ಲಿ ಯೋಚಿಸಿರಿ. ಮತ್ತು ಅಲ್ಲಾಹನಿಂದ ಭಯಪಡುವವರಾಗಿರಿ ದ್ವೇಷಿಗಳಾಗಬೇಡಿರಿ. ಇನ್ನೊಂದು ಯೋಚನಾರ್ಹ ವಿಷಯವೆಂದರೆ ಈ ವಚನಗಳು ಭವಿಷ್ಯಕ್ಕಾಗಿರುವ ಭವಿಷ್ಯವಾಣಿಗಳಾಗಿವೆ. ಅದು ಪ್ರಕಟಗೊಂಡ ನಂತರ ಸತ್ಯವಿಶ್ವಾಸಿಗಳ ವಿಶ್ವಾಸ ವೃದ್ಧಿಸಲಿ ಎಂದು ಮತ್ತು ಅಲ್ಲಾಹನ ವಾಗ್ದಾನವನ್ನು ಗುರುತಿಸುವಂತಾಗಲಿ ಎಂದು. ನಿಶ್ಚಯವಾಗಿಯೂ ಅಲ್ಲಾಹನು ಈ ವಚನಗಳಲ್ಲಿ ಖೈರುಲ್‌ಅನಾಮ್(ಸೃಷ್ಟಿಯಲ್ಲಿ ಉತ್ತಮರು)(ಸ) ರವರ ನಿಧನ ನಂತರ ಇಸ್ಲಾಮಿ ಧರ್ಮದ ಮೇಲೆ ಬರಬಹುದಾದ ಆಪತ್ತುಗಳು, ಗೊಂದಲಗಳು ಅವತರಿಸುವ ಸೂಚನೆಗಳನ್ನು ನೀಡಿದ್ದನು. ಮತ್ತು ಈ ವಾಗ್ಧನವನ್ನು ನೀಡಿದ್ದನು. ಇಂತಹ ಸಮಯದಲ್ಲಿ ಸತ್ಯವಿಶ್ವಾಸಿಗಳಲ್ಲಿ ಒಬ್ಬನನ್ನು ಖಲಿಫರನ್ನಾಗಿ ಮಾಡಲಾಗುವುದು ಮತ್ತು ಭಯಭೀತ ವಾತಾವರಣವನ್ನು ಶಾಂತಿಯಲ್ಲಿ ಪರಿವರ್ತಿಸಲಾಗುವುದು. ಅವರಿಗಾಗಿ ಧರ್ಮವನ್ನು ಬಲಪಡಿಸಲಾಗುವುದು. ಅತಿಕರ್ಮಿಗಳನ್ನು ನಾಶಪಡಿಸಲಾಗುವುದು. ನಿಸ್ಸಂಶಯವಾಗಿಯೂ ಈ ಭವಿಷ್ಯವಾಣಿಯಲ್ಲಿ ಹಝ್ರತ್ ಅಬೂಬಕರ್ ಅವರ ಕಾಲಘಟ್ಟವಲ್ಲದೇ ಬೇರೆ ಅಲ್ಲ. ಇದು ಸ್ಪಷ್ಟವಾದ ನಂತರ ನಿರಾಕರಿಸುವುದೆಂದರೆ ಏನರ್ಥ. ಹಝ್ರತ್ ಅಬೂಬಕರ್ ಅವರು ಇಸ್ಲಾಂ ಧರ್ಮವನ್ನು ಅತಿಕರ್ಮಿಗಳಿಂದಾಗಿ ಬೀಳುವ ಗೋಡೆಯನ್ನು ತಡೆದಿದ್ದರು. ಆಗ ಅಲ್ಲಾಹನು ಅವರ ಕೈಗಳಿಂದಲೇ ಒಂದು ಶಕ್ತಿಯುತ ಕೋಟೆಯಂತೆ ಮಾಡಿದರು. ಅದರ ಗೋಡೆಗಳು ಉಕ್ಕಿನಿಂದ ಹೆಚ್ಚು ಬಲವಾದುದ್ದಾಗಿದ್ದವು. ಯೋಚಿಸಿ ನೋಡಿರಿ. ಅದರಲ್ಲಿ ಏನಾದರೂ ಸಂಶಯವಿದೆಯೇ? ಇದರ ಉದಾಹರಣೆ ಬೇರೆ ಗುಂಪುಗಳಿಂದ ಪ್ರಸ್ತುತಪಡಿಸಬಹುದೇ?

ನಾನು ಅರಿತವನಾಗಿದ್ದೇನೆ. ಕೆಲ ಶಿಯಾ ಪಂಥಿಯರು ಈ ಸಂದರ್ಭದಲ್ಲಿ ಸುನ್ನಿಗಳೊಡನೆ ಜಗಳ ತೆಗೆಯುತ್ತಾರೆ, ದೀರ್ಘ ಸಮಯದಿಂದ ಈ ಜಗಳ ನಡೆದುಕೊಂಡು ಬಂದಿದೆ. ಕೆಲವೊಮ್ಮೆ ಈ ವಿಷಯದಲ್ಲಿ ವಾದ ವಿವಾದ ಹೆಚ್ಚಾಗಿ ಮಾರಾಮಾರಿ ಹಾಗೂ ಹತ್ಯೆಯವರೆಗೆ ಸಮಸ್ಯೆ ಉಲ್ಬಣಗೊಳ್ಳುತ್ತದೆ. ನ್ಯಾಯಾಲಯದವರೆಗೆ ಹೋಗುತ್ತಾರೆ. ನನಗೆ ಶಿಯಾ (ಜನರ) ಮತ್ತು ಅವರ ಕುಟುಂಬದ ವಿಚಾರದ ಮೇಲೆ ಆಶ್ಚರ್ಯವಾಗುತ್ತದೆ. ಅವರ ಅನುಮಾನಪೂರಿತ ಸ್ವಭಾವ ಮೇಲೆ ದುಃಖಿಸುತ್ತೇನೆ. ಅವರಿಗಾಗಿ ಹಲವು ದೃಷ್ಟಾಂತಗಳು ಗೋಚರವಾಗಿವೆ, ಸಾಕ್ಷ್ಯಗಳಿವೆ. ಅದಾಗ್ಯೂ ಅವರು ಅಸಂತುಷ್ಟರಾಗಿ ಪಲಾಯನ ಮಾಡುತ್ತಾರೆ ಮತ್ತು ನ್ಯಾಯಯುತರಂತೆ ವಿಚಾರ ಮಾಡುವುದಿಲ್ಲ. ಗಮನಿಸಿ ಇದೀಗ ನಾನು ಅವರ ಕಣ್ಣು ತೆರೆಸುವಂತಹ ಒಂದು ಕಾರ್ಯದೆಡೆ ಕರೆ ನೀಡುತ್ತೇನೆ. ಅದೇನೆಂದರೆ ನಮ್ಮೆರಡು ತಂಡಗಳು ಒಂದು ಮೈದಾನದಲ್ಲಿ ಹಾಜರಾಗಬೇಕು. ಅಲ್ಲಾಹನ ಮುಂದೆ ಅಳಲು ತೋಡಿಕೊಳ್ಳಬೇಕು ಮತ್ತು ಸುಳ್ಳುಗಾರರ ಮೇಲೆ ಶಾಪ ಹಾಕಬೇಕು.

ಇದಾದ ನಂತರವೂ ಒಂದು ವರ್ಷದವರೆಗೆ ನನ್ನ ಪ್ರಾರ್ಥನೆಯ ಪ್ರಭಾವ ಬೀರಲಿಲ್ಲ ಎಂದಾದರೆ ನಾನು ತನಗಾಗಿ ಯಾವ ಶಿಕ್ಷೆಯಾಗಲಿ ಅನುಭವಿಸಲು ಸಿದ್ಧನಿದ್ದೇನೆ. ಮತ್ತು ನೀವೇ ಸತ್ಯವಂತರು ಎಂದು ಒಪ್ಪಿಕೊಳ್ಳುತ್ತೇನೆ. ಅದಲ್ಲದೇ ನಾನು ಅವರಿಗೆ ಐದು ಸಾವಿರ ರೂಪಾಯಿಗಳು ನೀಡುವೆನು. ಈ ಹಣ ಕೊಡಲಿಲ್ಲ ಎಂದಾದರೆ ಅಂತ್ಯ ತೀರ್ಮಾನ ದಿನದವರೆಗೆ ನನ್ನ ಮೇಲೆ ಅಲ್ಲಾಹನ ಶಾಪವಿರಲಿ. ಅವರು ಬಯಸಿದರೆ ನಾನು ಈ ಮೊತ್ತ ಬ್ರಿಟಿಷರ ಖಜಾನೆಯಲ್ಲಿ ಅಥವಾ ಆದರ್ಶ ಪುರುಷರೊಬ್ಬರ ಬಳಿ ಜಮೆ ಮಾಡುವೆನು.

ಸಾರ್ವಜನಿಕರು ನನ್ನ ಸಂಬೋಧಕರಲ್ಲ. ಕೇವಲ ಆ ವ್ಯಕ್ತಿ ಅವನು ನನ್ನ ಈ ಗ್ರಂಥದ ಮಾದರಿಯಲ್ಲಿ ಒಂದು ಗ್ರಂಥ ಬರೆದು ತೋರಿಸಲಿ. ಈ ವಿಧಾನ ನಾನು ಏಕೆ ಅನುಸರಿಸುತ್ತಿದ್ದೇನೆ ಎಂದರೆ ನನ್ನ ಎದುರಾಳಿ ನಿಜವಾಗಿಯೂ ಆ ಮಟ್ಟಕ್ಕೆ ಅಂದರೆ ಮುಬಾಹಲಕ್ಕೆ ಬರುವಷ್ಟು ಜ್ಞಾನ ಹೊಂದಿದ್ದಾನೆಯೇ ಎಂದು ನೋಡಬೇಕಾಗಿದೆ. ಅಜ್ಞಾನಿ, ಮೂಢರು, ಅರಬಿ ಭಾಷೆಯಿಂದ ಯಾವುದೇ ಅರಿವಿಲ್ಲದವರ ಜೊತೆ ನನಗೆ ಯಾವ ಸಂಬಂಧ ಇಲ್ಲ. ಏಕೆಂದರೆ ಪಶುಸಮಾನವಿರುವಂತಹ ವ್ಯಕ್ತಿಗಳು ಬಹುಮಾನಕ್ಕೆ ಅರ್ಹರಾಗುವುದಿಲ್ಲ. ಒಂಟೆಯ ರೀತಿ ಇರುವ ವ್ಯಕ್ತಿ ಸಾಹಿತಿಗಳ ಸಜ್ಜನರ ಸಭೆಯಲ್ಲಿ ಸೇರುವ ಅರ್ಹತೆ ಪಡೆದಿರುವುದಿಲ್ಲ. ಎದುರಿಗೆ ಬರುವಂತಹ ವ್ಯಕ್ತಿ ಸಮಾನ ಅರ್ಹತೆಯುಳ್ಳವನಾಗುವುದು ಅವಶ್ಯವಾಗಿದೆ. ಯಾವ ವ್ಯಕ್ತಿ ನನ್ನಂತೆ ಅತ್ಯುತ್ತಮ ಲೇಖಕನಲ್ಲವೋ ಅವನು ನನ್ನ ದೃಷ್ಟಿಯಲ್ಲಿ ಸ್ಪರ್ಧೆಗೆ ಲಾಯಕ್ಕಿಲ್ಲ. ಅಲ್ಲಾಹನ ಅನುಗ್ರಹದಿಂದ ನಾನು ಅತ್ಯುನ್ನತಿ ಪಡೆದಿರುವೆನು. ಅಂದ ಹಾಗೆ ನಾನು ನನ್ನ ಎದುರಾಳಿ ನನಗೆ ಸಮಾನವಾಗಿರಬೇಕು ಎಂದು ಬಯಸುವೆನು ಹೊರತು ಬೇಕಾಬಿಟ್ಟಿ ವ್ಯಕ್ತಿಗಳಿಂದಲ್ಲ. ಏಕೆಂದರೆ ಅದು ನನ್ನ ಘನತೆಗೆ ತಕ್ಕದಾದುದಲ್ಲ. ನನ್ನ ಸ್ಥಾನಕ್ಕೆ ಚ್ಯುತಿ ತಂದುಕೊಟ್ಟಂತೆ. ಅಂದ ಹಾಗೆ ಅಜ್ಞಾನಿಗಳೊಂದಿಗೆ ನಾನು ಎಂದೂ ಸಂಬಂಧ ಇರಿಸೇನು, ಬದಲು ಅವರಿಂದ ದೂರ ಉಳಿಯುವೆನು.

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. ***(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖ಼ಝಾ಼ಇನ್ ಸಂಪುಟ-16, ಪುಟ-103)***

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಿಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝುಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 10 June 2021, Issue No. 23

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 22ರ ವರದಿಯ ಉಳಿದ ಭಾಗ)**

* ಮಿರಾಕಶಿನ ಇನ್ನೊರ್ವ ಮಿತ್ರರು ಅಬ್ದುಲ್ಲ ಕುನ್ನಾನಿ ಸಹ ಬೆಲ್ಜಿಯಂನಿಂದ ಬಂದಿದ್ದರು. ಅವರು ಹೇಳಿದರು. ನಾನು ಮಿರಾಕಶಿನ ಅಹ್ಮದಿಯಾಗಿದ್ದೇನೆ. ಜಲ್ಸ ಸಾಲಾನ ಬೆಲ್ಜಿಯಂ ಮತ್ತು ಜಲ್ಸ ಸಾಲಾನ ಹಾಲೆಂಡಿನಲ್ಲಿ ಭಾಗವಹಿಸಿದ್ದೆ ಆದರೆ ಖಲೀಫತುಲ್ ಮಸೀಹರ ಉಪಸ್ಥಿತಿಯಲ್ಲಿ ಇದು ನನ್ನ ಪ್ರಥಮ ಜಲ್ಸವಾಗಿದೆ. ನನಗೆ ಈ ಜಲ್ಸದ ಎಲ್ಲ ವ್ಯವಸ್ಥೆಗಳು, ಜೇನು ನೊಣದ ರಾಣಿಯ ಹಾಗೆ ಅದರ ಕೆಳಗೆ ಅನುಸರಣೀಯ ನೊಣಗಳು ಜೇನು ತಯಾರಿಸುವ ರೀತಿ ಕಂಡುಬಂದಿತು. ನನ್ನ ಸುಯೋಗದಿಂದ ನಾನು ಇಂತಹ ಸೌಹಾರ್ಧತೆ, ಪ್ರೀತಿ ಮತ್ತು ಇಂತಹ ಅಚ್ಚುಕಟ್ಟು ವ್ಯವಸ್ಥೆ ಕಾಣುವಂತಾಗಿದೆ. ಇಂತಹದು ನಾನು ಎಂದೂ ಯೋಚಿಸಿರಲಿಲ್ಲ.

ಜಲ್ಸದ ಭಾಷಣಗಳಿಂದಲೂ ತುಂಬ ಪ್ರಯೋಜನವಾಗಿದೆ. ನನ್ನ ಜ್ಞಾನದಲ್ಲಿ ವೃದ್ಧಿಯಾಗಿದೆ. ಜಲ್ಸದಲ್ಲಿ ಇತರ ಭಾಗಿಗಳಿಂದ ಮಾತುಕತೆಯಿಂದ ನನ್ನ ವಿಶ್ವಾಸ ದೃಢವಾಯಿತು. ಖಲೀಫತುಲ್ ಮಸೀಹ್ ಅವರ ಭಾಷಣಗಳನ್ನು ಕೇಳಿ, ನನಗೆ ಆಧ್ಯಾತ್ಮಿಕತೆಯಲ್ಲಿ ಹಾರಾಡುವ ಅನುಭವವಾಯಿತು. ನಾನು ಮರುಜನ್ಮ ಪಡೆದಿದ್ದೇನೆ ಎನಿಸುವಂತಾಯಿತು. ನನಗೆ ಇಹಲೋಕದಿಂದ ಸಂಬಂಧ ಕಳಚಿಕೊಂಡ ಹಾಗಾಯಿತು. ಅದರ ಅನುಭವ ವರ್ಣನಾತೀತವಾಗಿದೆ.

* ಬೆಲ್ಜಿಯಂ ಮತ್ತು ಜರ್ಮನಿಯ ಗಡಿಭಾಗದ Adamou Sidou ಸಾಹಿಬ್ ಜಲ್ಸದಲ್ಲಿ ಭಾಗವಹಿಸಲು ಬಂದಿದ್ದರು. ಅವರು ಹೇಳುತ್ತಾರೆ. ನನಗೆ ಒಬ್ಬ ಮಿತ್ರರ ಮೂಲಕ ಅಹ್ಮದಿಯಾ ಜಮಾಅತಿನ ಪರಿಚಯವಾಯಿತು. ಆದರೆ ಜಲ್ಸಕ್ಕೆ ಬರುವ ಮುನ್ನ ನಾನು ಧರ್ಮ ಹಾಗೂ ಜಮಾಅತಿನ ಬಗ್ಗೆ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಆದರೆ ಜಲ್ಸದಲ್ಲಿ ಭಾಗವಹಿಸಿದ ಮೇಲೆ ನನ್ನ ವಿಚಾರಗಳು ಬದಲಾದವು. ಯಾವ ಜಮಾಅತಿನ ಬಗ್ಗೆ ನಾನು ಅಸಡ್ಡೆಯಿಂದ ಇದ್ದೇನೋ ಈಗ ಅದೇ ಜಮಾಅತ್‌ನಲ್ಲಿ ನನ್ನ ಜೀವನದ ಅತ್ಯುತ್ತಮ ದಿನಗಳು ಜಲ್ಸ ಸಾಲಾನ ರೂಪದಲ್ಲಿ ಕಾಣಿಸಿತು.

ಅವರು ತಮ್ಮ ಒಂದು ಸ್ವಪ್ನ ವಿವರಿಸುತ್ತ ಹೇಳಿದರು. ಇಲ್ಲಿ ಜಲ್ಸದಲ್ಲಿ ನಾನು ಒಂದು ಸ್ವಪ್ನ ಕಂಡಿದೆ. ನಾನು ಸಮುದ್ರದಲ್ಲಿದ್ದೇನೆ, ತುಂಬ ಗಾಬರಿಗೊಂಡಿದ್ದೇನೆ. ಆದರೆ ಅಲ್ಲಾಹನ ಕಡೆಯಿಂದ ನನ್ನ ಹೃದಯ ಶಾಂತಗೊಳುತ್ತದೆ. ಆ ಶಾಂತತೆ ಈಗ ನಾನು ಜಾಗೃತನಾಗಿರುವಾಗ ಅನುಭವಿಸುತ್ತಿದ್ದೇನೆ. ಈ ಶಾಂತಿ ನನಗೆ ಜಲ್ಸ ಸಾಲಾನ ಜರ್ಮನಿಗೆ ಬಂದು ಲಭಿಸಿದೆ. ಈ ಜಲ್ಸವು ನಮ್ಮನ್ನು ಪರಿವರ್ತನೆ ಹೊಂದುವಂತೆ ಮಾಡಿದೆ.

* ಅಪ್ಪಟ ಕ್ರೈಸ್ತರಾದ ಒಬ್ಬ ಆರ್‌ಮಿನಿಯನ್ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ ಹೇಳಿದರು. ಇಂದು ಓರ್ವ ಪವಿತ್ರ ಮನುಷ್ಯರನ್ನು ಭೇಟಿಯಾಗಿ ನನಗೆ ಅಪಾರ ಸಂತೋಷ ದೊರೆತಿದೆ.

Alevism ನಿಂದ ಬಂದಿದ್ದ Cem utebey ಎಂಬ ಯುವಕರೊಬ್ಬರು ಹೇಳಿದರು. ನನಗೆ ಎಲ್ಲ ವ್ಯವಸ್ಥೆಗಳು ತುಂಬ ಮೆಚ್ಚುಗೆಯಾಯಿತು. ಇಸ್ಲಾಮ್ ಇಷ್ಟೊಂದು ಶಾಂತಿಪೂರ್ಣ ಧರ್ಮವಾಗಿದೆ ಎಂದು ತಿಳಿದಿರಲಿಲ್ಲ. ಖಲೀಫರಿಂದ ಪ್ರೀತಿ ಮತ್ತು ಶಾಂತಿಯ ಅನುಭವವಾಯಿತು.

* ಓರ್ವ ಅರೇಬಿ ಯುವಕ ಹೇಳಿದರು. ಖಲೀಫರ ಮಾತುಗಳು ತುಂಬ ಸಮರ್ಥನೀಯವಾಗಿವೆ. ಅವರ ಪ್ರಸ್ತುತಪಡಿಸುವಿಕೆಯ ದಿಶೆ ನಿರ್ದೇಶನಗಳು ತುಂಬ ಪ್ರಭಾವಿ ರೀತಿಯದ್ದಾಗಿವೆ. ಅವರ ವ್ಯಕ್ತಿತ್ವದಿಂದಲೆ ಶಾಂತಿ ಗೋಚರಿಸುತ್ತಿತ್ತು. ನನಗೆ ಮುಸ್ಲಿಮನಾಗಿಯೂ ಈ ಶಿಕ್ಷಣ ತಿಳಿದಿರಲಿಲ್ಲ.

* Dr. Valdis steims ಸಾಹಿಬ ಅವರು Latvia ದೇಶದಿಂದ ಬಂದಿದ್ದರು. ಅವರು ರಾಜಕೀಯದಲ್ಲಿ ಉನ್ನತ ಸ್ಥಾನ ಹೊಂದಿದವರಾಗಿದ್ದಾರೆ ಮತ್ತು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದರು. ಈಗ ಅವರು research ಮಾಡುತ್ತಿದ್ದಾರೆ ಮತ್ತು theory ವಿಷಯದ ಮೇಲೆ ಗ್ರಂಥ ರಚಿಸುತ್ತಿದ್ದಾರೆ. ಅವರು ಹೇಳಿದರು. ನಾನು ಇಂದು ಖಲೀಫತುಲ್ ಮಸೀಹ್ ಅವರ ಸಂಬೋಧನೆ ಆಲಿಸಿದಾಗ ನಾನೊಬ್ಬ ವಿದ್ಯಾರ್ಥಿಯಾಗಿದ್ದೇನೆ ಎಂದೆನಿಸಿತು. ನಾನು ಸಹ ಅದೇ ದೃಷ್ಟಿ ಹೊಂದಿದ್ದೇನೆ ಮತ್ತು ಅದು ಶಾಂತಿಗೋಸ್ಕರ ಅನಿವಾರ್ಯ ಎಂದು ಭಾವಿಸುತ್ತೇನೆ. ನಾನು ತೌರಾತನ್ನೂ ಓದಿರುತ್ತೇನೆ. ಮೂಸಾ(ಅ) ರವರ ಶಿಕ್ಷಣವನ್ನು ಅರಿತಿದ್ದೇನೆ. ನಾನಂತೂ ಇಂತಹ ಮಾತುಗಳಿಗೆ ಹಂಬಲಿಸುತ್ತಿದ್ದೆ.

ಮತ್ತು ಅವರು ಹೇಳಿದರು. ನಾನು ಬಹಳಷ್ಟು ಜನರನ್ನು ಭೇಟಿಯಾಗಿದ್ದೇನೆ. ಆದರೆ ಇಂದು ಖಲೀಫತುಲ್ ಮಸೀಹ್(ರ) ರನ್ನು ಕಂಡಾಗ ವಿಶಿಷ್ಟ ವ್ಯಕ್ತಿಯಾಗಿ ಕಂಡರು. ಇಂತಹ ಜನರು ಲೋಕದಲ್ಲಿ ತುಂಬ ವಿರಳ. ಅವರಿಂದ ಜಾಣ್ಮೆ, ಸತ್ಯ ಮತ್ತು ಬುದ್ಧಿವಂತಿಕೆ ಪ್ರಕಟವಾಗುತ್ತವೆ. ನಾನು ಮನುಷ್ಯರನ್ನು ಬಹು ಬೇಗ ಅರಿತುಕೊಳ್ಳುತ್ತೇನೆ. ಖಲೀಫರು ವಿಶೇಷ ರೀತಿಯ ಮನುಷ್ಯರಾಗಿದ್ದಾರೆ. ಅವರದ್ದೇ ಆದ ಒಂದು ವಿಚಾರವಿದೆ. ಅವರು ಹೇಳಿದೆಲ್ಲ ಸತ್ಯವಾಗಿರುತ್ತದೆ.

* ತುರ್ಕಿಗೆ ಸಂಬಂಧಿಸಿದವರಾದ Attila Caliscan ಸಾಹಿಬ ತಮ್ಮ ಅನಿಸಿಕೆಗಳನ್ನು ತಿಳಿಸುತ್ತ ಹೀಗೆ ಹೇಳಿದರು. ನನಗೆ ಖಲೀಫರನ್ನು ಮೊದಲ ಬಾರಿಗೆ ನೋಡುವ ಅವಕಾಶ ಸಿಕ್ಕಿತು. ತುಂಬ ಪ್ರೀತಿಸುವವರಾಗಿದ್ದಾರೆ. ಏನೂ ಯೊಚಿಸದೆಯೇ ಅವರ ಮೇಲೆ ವಿಶ್ವಾಸ ತರಬಹುದಾಗಿದೆ. ಖಲೀಫರು ಹೇಳಿದಂತಹ ಮಾತುಗಳು ಪವಿತ್ರ ಖುರ್‌ಆನಿನ ಹಾಗೂ ಹಝ್ರತ್ ರಸೂಲುಲ್ಲಾಹ್(ಸ) ರವರ ಮಾತುಗಳೇ ಆಗಿದ್ದವು. ನಿಶ್ಚಯವಾಗಿಯೂ ನಾವು ಈ ಶಿಕ್ಷಣವನ್ನು ಮರೆತಿದ್ದೇವೆ.

ಮತ್ತು ಅವರು ಹೇಳಿದರು. ಖಲೀಫತುಲ್ ಮಸೀಹ್ ಸಾಮಾನ್ಯ ಮನುಷ್ಯರಂತೆ ಅಲ್ಲ. ಬದಲು ಅವರಲ್ಲಿ ಒಂದು ವಿಶೇಷತೆ ಇದೆ. ಅದನ್ನು ಹೇಳಲು ನನ್ನ ಬಳಿ ಪದಗಳಿಲ್ಲ. ಸಮಯದ ಅಭಾವವಿದ್ದರೂ ಹುಝೂರ್ ತಮ್ಮ ಸಂಬೋಧನೆಯಲ್ಲಿ ಇಸ್ಲಾಮಿನ ಪ್ರಾಥಮಿಕ ಹಂತಗಳನ್ನು ವಿವರಿಸಿದರು. ಏನೆಲ್ಲ ಹೇಳಿದ್ದಾರೋ ಅದು ಅತ್ಯುತ್ತಮವಾಗಿತ್ತು. ಹುಝೂರ್ ಪರಸ್ಪರ ಒಟ್ಟುಗೂಡುವ ಶಿಕ್ಷಣ ಹೇಳಿಕೊಟ್ಟರು. ಎಲ್ಲರೂ ಕೂಡಿ ಬಾಳಬೇಕಾಗಿದೆ, ಆಗ ಮಾತ್ರ ಶಾಂತಿ ನೆಲೆ ನಿಲ್ಲುವುದು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ಎಲ್ಲರಿಗೂ ತಿಳಿಸಬಯಸುತ್ತದೆ. ಇದು ಬಹುದೊಡ್ಡದಾದ ಕೆಲಸವಾಗಿದೆ.

* ಜರ್ಮನ್ ಮಿತ್ರರೊಬ್ಬರು Heiko Fahnicke ಸಾಹಿಬ್ ಹೇಳಿದರು. ಖಲೀಫರನ್ನು ನೊಡುವುದು ಮತ್ತು ಅಹ್ಮದಿಯತ್ ಬಗ್ಗೆ ತಿಳಿಯಲು ಇದು ನನ್ನ ಮೊದಲ ಅವಕಾಶವಾಗಿತ್ತು. ಖಲೀಫರು ಅತ್ಯಂತ ಪ್ರೀತಿಸುವವರು ಮತ್ತು ಶಾಂತಿಪ್ರಿಯರಾಗಿ ಕಾಣುತ್ತಾರೆ. ಅವರು ಹೇಳಿದ್ದೆಲ್ಲ ಸತ್ಯವಾಗಿದೆ. ಎಲ್ಲ ಮನುಷ್ಯರು ಅದರಂತೆ ನಡೆಯಲು ಪ್ರಾರಂಬಿಸಿದರೆ ಲೋಕದಲ್ಲಿ ಶಾಂತಿ ನೆಲೆ ನಿಲ್ಲುವುದು. ನಾನು ನನ್ನ ಸಾಮರ್ಥ್ಯಕ್ಕೆ ಮೀರಿ ಇಲ್ಲಿಂದ ಇಸ್ಲಾಮಿನ ಬಗ್ಗೆ ಕಲಿತಿರುವೆನು. ತುಂಬ ಹೆಮ್ಮೆ ಅನಿಸಿತು.

* ಪೋಲೀಸ್ ಅಧಿಕಾರಿಯೊಬ್ಬರು ಹೇಳಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್, ಇಸ್ಲಾಮಿನ ಶಿಕ್ಷಣ ಪ್ರಸ್ತುತಪಡಿಸುತ್ತಿದ್ದು, ಅದು ಪೋಲೀಸರಿಗೆ ಬೇಕಾಗುವಂತೆಯೇ ಇದೆ.

* ಈ ಜಲ್ಸದಲ್ಲಿ ಭಾಗವಹಿಸಿದ್ದ ಇಬ್ಬರು ಮೂವರು ವಿದ್ಯಾರ್ಥಿಗಳು ಹೇಳಿದರು. ಮಾಧ್ಯಮಗಳು ಬಿತ್ತರಿಸುತ್ತಿರುವ ಇಸ್ಲಾಮಿನ ಚಿತ್ರಣ ತುಂಬ ಆಳವಾದ ಪ್ರಭಾವ ಹೊಂದಿರುತ್ತದೆ. ಆದರೆ ಇಲ್ಲಿ ಬಂದು ಮೊದಲು ಖುರ್‌ಆನ್ ಪಠಣ ಕೇಳಿದೆ. ಅದರಲ್ಲಿ "ಲಾ ಇಕ್ರಾಹ ಫಿದ್ದೀನ್" (ಧರ್ಮದಲ್ಲಿ ಬಲತ್ಕಾರವಿಲ್ಲ) ಎಂಬ ವಿವರವಿತ್ತು. ಮತ್ತು ವಿಶೇಷವಾಗಿ ಖಲೀಫರ ಸಂಬೋಧನೆ ಆಲಿಸಿದ ನಂತರ ಯಥಾರ್ಥ ಶಿಕ್ಷಣದ ಅರಿವಾಯಿತು. ನಮಗೆ ಇಂದು ತಿಳಿಯಿತು. ಇಸ್ಲಾಮಿನ ನಿಜವಾದ ಶಿಕ್ಷಣ ಹಝ್ರತ್ ರಸೂಲುಲ್ಲಾಹ್(ಸ) ರವರು ಪ್ರಸ್ತುತಪಡಿಸಿದಂತಹ ಶಿಕ್ಷಣ ಇಂದಿಗೂ ಖಾಯಂ ಇದೆ. ಇಸ್ಲಾಮಿನಲ್ಲೂ ಎರಡು ರೀತಿಯ ಉಗ್ರವಾದಿಗಳಿದ್ದಾರೆ ಎಂದು ನಾನು ಭಾವಿಸಿದ್ದೆ. ಒಂದು ಲೌಕಿಕ ಕಾರ್ಯಗಳಲ್ಲಿ ಮುಳುಗಿದವರು, ಮತ್ತೊಂದು ಅತಿ ಉಗ್ರತೆ ಹೊಂದಿದವರು. ಆದರೆ ಇಂದು ಇಸ್ಲಾಮಿನ ನಿಜ ಸ್ವರೂಪವು ಕಾಣಲು ಸಿಕ್ಕಿತು. ಅದು ಈ ಎರಡರ ಮಧ್ಯದಲ್ಲಿದೆ. ಅದುವೇ ಅಹ್ಮದಿಯಾ ಜಮಾಅತ್ ಆಗಿದೆ.

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.